ತ್ರೈಮಾಸಿಕ

# ಬೃಂದಾವನ ವಾಣಿ

ಸಂಚಿಕೆ 56

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಜುಲೈ , ೨೦೨೬




KARNATAKA CULTURAL ORGANIZATION BRINDAVANA (KCOB) NJ, USA

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ

# ಪರಿವಿಡಿ


- ಸಂಪಾದಕೀಯ..3
- ಸಂಪಾದಕೀಯ ತಂಡ4
- ಅಧ್ಯಕ್ಷರ ನುಡಿ..5
- ಜ್ಞಾನ ದೀವಿಗೆ6

**ವಿಶೇಷ ಕಾರ್ಯಕ್ರಮಗಳು**

- ಶ್ರೀಗಳ ಪುರ ಪ್ರವೇಶ7
- ವಿಶ್ವನಮನ ಕಾರ್ಯಕ್ರಮ10
- ಸಂಗೀತ ಕಾರ್ಯಕ್ರಮ12
- ವನವಿಹಾರ14
- ಅನಿಸಿಕೆ16
- ಮೇಲ್ನೋಟ 17

**ಕಥಾ ಸಂಕಲನ**

- ಟಿಪ್ಪಿ19

**ಕವನ ಸಂಕಲನ**

- ಬೆಂಗಳೂರಿನ ನೆನಪುಗಳು24
- ಎಲ್ಲರು ಹೊರಡುತ್ತಾರೆ26
- ತಾಯಿಗಿಂತ ದೇವರಿಲ್ಲ27
- ತಾವರೆ28

**ಅಡಿಗೆ ಅರಮನೆ**

- ಮಾವಿನಕಾಯಿ ಚಟ್ನಿ 30
- ಒತ್ತು ಶಾವಿಗೆ 31
- ಗಸಗಸೆ ಪಾಯಸ32
- ಚಿಣ್ಣರ ಲೋಕ33
- ಕ್ಯಾಮರಾ ಕಣ್ಣಲ್ಲಿ..37
- ಹಿಂದಿನ ಸಂಚಿಕೆಗಳು42



# ಬದಲಾವಣೆ

**"ಇರುಳಿರಳಳಿದು ದಿನದಿನ ಬೆಳಗೆ  ಸುತ್ತಮುತ್ತಲೂ ಮೇಲಕೆ ಕೆಳಗೆ**
**ಗಾವುದ ಗಾವುದ ಗಾವುದ ಮುಂದಕೆ  ಎವೆ ತೆರೆದಿಕ್ಕುವ ಹೊತ್ತಿನ ಒಳಗೆ , ಹಕ್ಕಿ ಹಾರುತಿದೆ ನೋಡಿದಿರಾ? "**

ವರಕವಿ ಬೇಂದ್ರೆ ಯವರ ಈ ಮಾತು ಇಂದಿಗೂ ಎಂದೆಂದಿಗೂ ಪ್ರಸ್ತುತವಾಗಿರುತ್ತದೆ. ಯಾರಿಗೂ ಕಾಯದೆ, ಕೇಳದೆ ಮುಂದೆ ಸಾಗುವುದು "ಕಾಲ" ಮಾತ್ರ. ಚಳಿಗಾಲದ ಮಂಜು ಕರಗಿ ,  hibernation'ನಲ್ಲಿರುವ ಜೀವ ಜಂತುಗಳು ವಸಂತನ ಬರುವಿಕೆಗೆ ಕಾಯುವುದಾಗಲಿ, ಹೊಸ ಚಿಗುರಿನ ಮರದಲ್ಲಿ ಹಕ್ಕಿಗಳ ಕಲರವ  ಮರಳುವುದಾಗಲಿ, ಎಲ್ಲವೂ ಸಹಜವಾಗಿಯೇ ನಡೆಯುತ್ತವೆ. "ಬದಲಾವಣೆ" ಯೊಂದೆ ಶಾಶ್ವತ.

ಪಶ್ಚಿಮ ಬಂಗಾಳ ರಾಜ್ಯ ಚುನಾವಣೆ ಈ ಸಲ ಹೊಸ  ದಾಖಲೆಗೆ ನಾಂದಿ ಹಾಡಿತು. ಭಾರತಕ್ಕೆ ಸ್ವತಂತ್ರ ಸಿಕ್ಕಾಗಿನಿಂದ ಇಲ್ಲಿಯವರೆಗೆ, ರಾಜ್ಯದಲ್ಲಿ ಯಾವುದೇ ಬಲಪಂಕ್ತಿಯ ಪಕ್ಷಗಳು ಬಹುಮತಕ್ಕೆ ಬಂದಿರಲಿಲ್ಲ. ಆದರೆ ಈ ಸಲ ಬಿಜೆಪಿಯು, ಭರ್ಜರಿ ಬಹುಮತ ಗಳಿಸಿ, ಸುವೆಂಧು ಅಧಿಕಾರಿಯ ನೇತೃತ್ವದಲ್ಲಿ ಸರಕಾರ ರಚಿಸಿದೆ. ನಮ್ಮ ಸಮಾಜದಲ್ಲಿ ಮುಳ್ಳಾಗಿ ಕಾಡುತ್ತಿರುವ  ಬಾಂಗ್ಲಾದೇಶದ ನಿರಾಶ್ರಿತರ ಸಮಸ್ಯೆಗೆ ಪರಿಹಾರ ಕೊಟ್ಟು, ಸಮಾಜವನ್ನು ಅಭಿವೃದ್ಧಿಯ ಕಡೆ ನಡೆಸಲಿ ಎಂದು ಆಶಿಸುತ್ತೇನೆ.

ದಕ್ಷಿಣ ಭಾರತದಲ್ಲೂ "ಬದಲಾವಣೆ" ಯ ಅಲೆ ಬೀಸಿದೆ . ತಮಿಳುನಾಡು ಚುನಾವಣೆ ಈ ಸಲ ಹೊಸ ದಾಖಲೆ ಸೃಷ್ಟಿ ಮಾಡಿತು. 60 ವರ್ಷಗಳಿಂದ DMK ಮತ್ತು AIADMK ಪಕ್ಷಗಳದ್ದೇ ಸಾಮ್ರಾಜ್ಯವಾಗಿದ್ದ ತಮಿಳುನಾಡಿನಲ್ಲಿ ವಿಜಯ್ ತಳಪತಿ ನೇತೃತ್ವದಲ್ಲಿ TVK ಪಕ್ಷವು ಹೊಸ ಅಲೆಯನ್ನೇ ಎಬ್ಬಿಸಿದೆ . ಮೊದಲಬಾರಿಗೆ ಪೈಪೋಟಿ ನಡೆಸಿದ್ದಾದರೂ, ಅದ್ಭುತ ವಿಜಯ ಸಾಧಿಸಿ, ಸರಕಾರ ರಚನೆ ಮಾಡುವಲ್ಲಿ ಯಶಸ್ವಿಯಾಗಿದೆ. ಚುನಾವಣಾ ಪ್ರಣಾಳಿಕೆಯಲ್ಲಿ ಕೊಟ್ಟ ಮಾತನ್ನು ಪೂರೈಸಲಿ, ಜನ ಸಾಮಾನ್ಯರ ಕಷ್ಟ ನೀಗಲಿ ಎಂದು ಹಾರೈಸುವೆ.

ಕರ್ನಾಟಕವು ನಾಯಕತ್ವದಲ್ಲಿ "ಬದಲಾವಣೆ" ಕಂಡಿತು. ಕಾಂಗ್ರೆಸ್ ಪಕ್ಷವು ಇನ್ನು ಅಧಿಕಾರದಲ್ಲಿದ್ದರೂ ಸಿದ್ದರಾಮಯ್ಯ ತನ್ನ ಮುಖಮಂತ್ರಿ ಪಟ್ಟವನ್ನು ಡಿ. ಕೆ. ಶಿವಕುಮಾರ್ ಗೆ ಹಸ್ತಾಂತರ ಗೊಳಿಸಿದರು.

ಫೆಬ್ರವರಿಯಲ್ಲಿ ಶುರುವಾದ ಯು.ಎಸ್- ಇಸ್ರೇಲ್- ಇರಾನ್ ಯುದ್ಧವು ಅಂತೂ ಅಂತ್ಯಗೊಂಡಿದೆ. ಪ್ರಭಲ ದೇಶದ ನಾಯಕರ ಶಕ್ತಿಪ್ರದರ್ಶನಕ್ಕೆ, ಜನಸಾಮಾನ್ಯರು ಬೆಲೆಕಟ್ಟಬೇಕಾಗಿದೆ. ಎಲ್ಲೆಡೆ ಪೆಟ್ರೋಲ್, ಡಿಸೀಲ್, ಅಡಿಗೆ ಅನಿಲಕ್ಕೆ ಕೊರತೆಯುಂಟಾಗಿ, ದೇಶಗಳ ವಾಣಿಜ್ಯ ಪ್ರಗತಿಗೆ ಧಕ್ಕೆಯುಂಟು ಮಾಡಿದೆ. ಹಣದುಬ್ಬರ, ದರ ಮುಗಿಲೇರಿದ್ದರಿಂದ, ಜನ ಸಂಕಷ್ಟಕ್ಕೊಳಗಾಗಿದ್ದರೆ ಮುಂಬರುವ ದಿನಗಳಲ್ಲಿ ದೇಶಗಳ ನಾಯಕರು ತಮ್ಮ ಒಳ್ಳೆಯ ನಿರ್ಧಾರಗಳಿಂದ, ಸಮಾಜಾಭಿವೃದ್ಧಿ ಕಾರ್ಯಗಳಿಂದ, ಜನರ ಕಷ್ಟಕಾರ್ಪಣ್ಯಗಳನ್ನು ನೀಗಿಸಿ ಸುಖಶಾಂತಿಯ ಕಡೆಗೆ ಕರೆದೊಯ್ಯಲಿ ಎಂದು ಆ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಕ್ರೀಡಾಪ್ರಪಂಚದಲ್ಲೂ ಗದ್ದಲ ಜೋರಾಗಿದೆ . ಎಲ್ಲಿಯವರೆಗೆ ಗುರಿ ಮುಟ್ಟಲೇಬೇಕು ಎನ್ನುವ ಧ್ಯೇಯ ಇರುತ್ತದೋ, ಕೆಳಗೆ ಬಿದ್ದಾಗ  ಆತ್ಮಾವಲೋಕನ ಮಾಡಿಕೊಂಡು, ಮಾಡಿದ ತಪ್ಪನ್ನು ವಿಶ್ಲೇಷಿಸಿ ತಿದ್ದಿಕೊಂಡು ಮುಂದೆ ನಡೆಯುವ ಮನಸ್ಥಿತಿ ಇರುತ್ತದೋ, ನಡೆವ ದಾರಿಯಲ್ಲಿ ಎಂತದೇ ದೊಡ್ಡ ಸವಾಲುಗಳು ಎದುರಾದರು ಛಲಬಿಡದೆ ಮುನ್ನುಗ್ಗುವ ಧೈರ್ಯವು ಇರುತ್ತದೋ ಅಲ್ಲಿಯವರೆಗೆ ಜಯ ಸಿಕ್ಕುವುದು ನಿಶ್ಚಿತ.  "ಈ ಸಲ ಕಪ್ ನಮ್ದೇ"  ಘೋಷಣೆ ಕಳೆದ ಎರಡು ವರ್ಷಗಳಿಂದ ವಾಸ್ತವಿಕತೆಯಾಗಿ ಬದಲಾಗಿದೆ. ಈ ಸಲವೂ RCB ಐಪಿಎಲ್ ಸರಣಿಯನ್ನು ಗೆದ್ದು ಕಪ್ ತನ್ನದಾಗಿಸಿಕೊಂಡಿತು. ಕಳೆದ 18 ವರ್ಷಗಳಲ್ಲಿ ಅನುಭವಿಸಿದ ಸೋಲು, ಅವಮಾನಗಳಿಗೆ ಪೂರ್ಣ ವಿರಾಮ ಹಾಕಿ ಕಳೆದ ವರ್ಷ ಕಪ್ ಗೆದ್ದಾಗ, ನಮ್ಮ ಕನ್ನಡಿಗರಿಗೆ ಆದ ಸಂತಸ ಹೇಳತೀರದು. ಗೆಲುವಿನ ಸರಣಿಯನ್ನು ಈ ವರ್ಷವೂ ಮುಂದುವರೆಸಿ ಕಪ್ ಮತ್ತೆ ಗೆದ್ದದ್ದಂತೂ, ನಮ್ಮೆಲ್ಲರ ಖುಷಿಗೆ ಪಾರವೇ ಇಲ್ಲದಂತಾಗಿದೆ.

ಫಿಫಾ ವರ್ಲ್ಡ್ ಕಪ್ ಫುಟ್ಬಾಲ್ ಪಂದ್ಯಗಳು ಶುರುವಾಗುತ್ತಿದ್ದಂತೆ, ಫುಟ್ಬಾಲ್  ಪ್ರೇಮಿಗಳ ಉತ್ಸಾಹಕ್ಕೆ ಮಿತಿಯೇ ಇಲ್ಲದಂತಾಗಿದೆ. ಪ್ರತಿ ಪಂದ್ಯದಲ್ಲೂ ರೋಚಕ ತಿರುವುಗಳು, ಕೊನೆಯವರೆಗೂ ಬಿಟ್ಟುಕೊಡದೆ ಆಡುವ ಛಲ, ಗೆದ್ದನಂತರ ಅಭಿಮಾನಿಗಳ, ಆಟಗಾರರ ವಿಜಯೋತ್ಸವ ನೋಡಲು ಎರಡು ಕಣ್ಣು ಸಾಲದು. ಅರ್ಜೆಂಟೀನಾ ತನ್ನ ಚಾಂಪಿಯನ್ಷಿಪ್ ಪಟ್ಟ ಉಳಿಸಿಕೊಳ್ಳುತ್ತದ, ಅತಿಹೆಚ್ಚು ಸಲ ಗೆದ್ದ ಬ್ರೆಜಿಲ್ ತನ್ನ ಪಟ್ಟವನ್ನು ವಾಪಸು ಪಡೆದುಕೊಳ್ಳುತ್ತದ ಅಥವಾ ಹೊಸ ಚಾಂಪಿಯನ್ಸ್ ಹುಟ್ಟುತ್ತಾರ ಎಂದು ಕಾದು ನೋಡಬೇಕಾಗಿದೆ.

ನಮ್ಮ ಬೃಂದಾವನ ಕನ್ನಡ ಕೂಟದಲ್ಲೂ ಅನೇಕ ಚಟುವಟಿಕೆಗಳು ನಡೆಯುತ್ತಲೇ ಇವೆ . ಸಂಕಲ್ಪ ತಂಡದ ನೇತೃತ್ವದಲ್ಲಿ ನಡೆದ ವನವಿಹಾರ ಯಶಸ್ವಿಯಾಗಿ ನೆರವೇರಿತು. ಶಾಲೆಗಳಿಗೆ ಬೇಸಿಗೆ ರಜೆ ಶುರುವಾಗುತ್ತಿದ್ದಂತೆ ಬೃಂದಾವನ ಕನ್ನಡ ಕಲಿಸೋಣ ಶಾಲೆಗಳಲ್ಲಿ ಮುಂದಿನ ಶೈಕ್ಷಣಿಕ ವರ್ಷದ ನೋಂದಣಿ ಪ್ರಾರಂಭವಾಗಿದೆ.

'ನ್ಯೂ ಜೆರ್ಸಿ ಬೋರ್ಡ್ ಆಫ್ ಎಜುಕೇಶನ್' ನಿಂದ ಬೃಂದಾವನ ಶಾಲೆಗಳ ಮೂರು 12th grade ನ ವಿದ್ಯಾರ್ಥಿಗಳು Seal of Biliteracy ಪಡೆದು ಅದ್ಭುತ ಸಾಧನೆ ಮಾಡಿದ್ದಾರೆ. ಮುಂಬರುವ ವರ್ಷಗಳಲ್ಲಿ ಇನ್ನು ಹೆಚ್ಚಿನ ವಿದ್ಯಾರ್ಥಿಗಳು ತಮ್ಮ ಕನ್ನಡ ಕಲಿಕೆ ಮುಂದುವರೆಸಿ, ಹೆಚ್ಚಿನ ಸಾಧನೆ ಮಾಡಲಿ ಎಂದು ಎಲ್ಲರೂ ಆಶಿಸೋಣ.

ಬೃಂದಾವನವಾಣಿಯ ಈ ಸಂಚಿಕೆಯಲ್ಲಿ ಅನೇಕ ಸ್ವಾರಸ್ಯಕರ ಲೇಖನಗಳು, ಕಥೆಗಳು, ಕವನಗಳು ಅಷ್ಟೇ ಅಲ್ಲದೆ ಮಕ್ಕಳ ಕುಂಚದಿಂದ ಅರಳಿದ ಕಲೆಗಳನ್ನು ಚಿಣ್ಣರಲೋಕದಲ್ಲಿ ನೋಡಬಹುದು. ಎಲ್ಲವನ್ನು ಓದಿ, ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ನಮಗೆ ತಿಳಿಸಿ .

ಧನ್ಯವಾದಗಳು
**ರೋಹಿಣಿ ಮಹೇಶ್**
ಸಾಹಿತ್ಯ ಬೃಂದಾವನ
"ಸಂಕಲ್ಪ" ತಂಡ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿ.

# ಸಂಪಾದಕೀಯ ತಂಡ



**ಶ್ರೀವಿದ್ಯಾ ಪ್ರಶಾಂತ್**
ಪ್ರಧಾನ ಸಂಪಾದಕರು



**ರೋಹಿಣಿ ಮಹೇಶ್**
ಸಂಚಿಕೆ ವಿನ್ಯಾಸ



**ರಾಗಿಣಿ ದರ್ಶನ್**
ವಿಷಯ ನಿರ್ವಹಣೆ



**ಪಲ್ಲವಿ ಮಂಜುನಾಥ್**
ವಿಷಯ ನಿರ್ವಹಣೆ



**ವಾಣಿ ಗಿರೀಶ್**
ವಿಷಯ ನಿರ್ವಹಣೆ



**ಸೌಮ್ಯ ರವಿ**
ವಿಷಯ ನಿರ್ವಹಣೆ

ಮುಖಪುಟ ಚಿತ್ರ ಕೃಪೆ : ಮಂಜುನಾಥ್ ಶಂಕರ್

# ಅಧ್ಯಕ್ಷರ ನುಡಿ



**ನ**ಮಸ್ಕಾರಗಳು,

ಬೃಂದಾವನ ಬಳಗದವರೆಲ್ಲರೂ ಬೇಸಿಗೆಯ ಬಿಸಿಲ ಝಳದ ಅನುಭವ ಆಗುತ್ತಿರಬೇಕು ಎಂದು ಅನ್ನಿಸುತ್ತಿದೆ.

ಕಳೆದ ವಾರದ ಪಿಕ್ನಿಕ್ ಕಾರ್ಯಕ್ರಮ, ಅಕ್ಕ ಸಮ್ಮೇಳನದ ತಯಾರಿ, ಭಾರತ ಗೆದ್ದ T-20 ವರ್ಲ್ಡ್ ಕಪ್, ನಮ್ಮ ಬೆಂಗಳೂರಿನ RCB ತಂಡಕ್ಕೆ ಸಿಕ್ಕ ಎರಡನೇ ಬಾರಿಯ IPL ಟ್ರೋಫಿ, ಹಾಗೂ ನಮ್ಮ ನ್ಯೂಜೆರ್ಸಿಯಲ್ಲಿ ನಡೆಯುತ್ತಿರುವ FIFA-2026 – ಇನ್ನೂ ವಿಶೇಷ.

ಬೃಂದಾವನ ಪಿಕ್ನಿಕ್ ಜೂನ್ 21ರಂದು ಹೈಲ್ಯಾಂಡ್ ಪಾರ್ಕ್‌ನಲ್ಲಿ ಸುಮಾರು 250ಕ್ಕೂ ಹೆಚ್ಚು ಜನ ಸೇರಿ, RCB ಥೀಮ್ ಇಟ್ಟುಕೊಂಡು ಎಲ್ಲರೂ RCB ಜೆರ್ಸಿ ಹಾಕಿಕೊಂಡು ಆಟ, ಊಟ, ಮೋಜು ಹಾಗೂ ಮಸ್ತಿ ಮಾಡಿದರು. ಸುಮಾರು ಹನ್ನೊಂದು ಗಂಟೆಗೆ ಅಂತಾರಾಷ್ಟ್ರೀಯ ಯೋಗ ದಿನವನ್ನು ಯೋಗಾಚರಣೆಯ ಮೂಲಕ ಪ್ರಾರಂಭಿಸಲಾಯಿತು. ಮಧ್ಯಾಹ್ನದ ವೇಳೆಗೆ ಬಾಯಲ್ಲಿ ನೀರೂರಿಸುವ ಜಾಮೂನ್, ಅವರೆಬೇಳೆ ಪಲಾವ್, ಮದ್ದೂರ್ ವಡೆ ಮತ್ತಿತರ ಖಾದ್ಯಗಳೊಂದಿಗೆ ಊಟ ಮುಗಿಯುವ ವೇಳೆಗೆ ಮಕ್ಕಳ ಆಟಗಳು, ಕ್ರಿಕೆಟ್, ಹಿರಿಯರಿಗೆ ಕ್ವಿಜ್/ಅಂತ್ಯಾಕ್ಷರಿ ಪ್ರಾರಂಭವಾದವು.

ಅಕ್ಕದ ಅಧ್ಯಕ್ಷರಾದ ಮಧು ರಂಗಯ್ಯ ಹಾಗೂ ಕಾರ್ಯಕಾರಿ ಸಮಿತಿಯ ಅನೇಕ ಸದಸ್ಯರು ಅಕ್ಕ ಸಮ್ಮೇಳನ ಫಿಲಡೆಲ್ಫಿಯಾ-2026ಕ್ಕೆ ಮತ್ತೊಮ್ಮೆ ಎಲ್ಲರಿಗೂ ಆಹ್ವಾನ ನೀಡಿದರು. ಬನ್ನಿ, ಎಲ್ಲರೂ ಕೈ ಜೋಡಿಸೋಣ, ಇದು ವಿಶೇಷವಾದ ಅಕ್ಕದ ರಜತ ಮಹೋತ್ಸವ ಕಾರ್ಯಕ್ರಮ. ನಮ್ಮ ಮನೆಯಂಗಳದಲ್ಲಿ ನಡೆಯುತ್ತಿದೆ, ಎಲ್ಲ ಕನ್ನಡಿಗರು ಸೇರಿ ಕನ್ನಡದ ರಥವನ್ನು ಎಳೆಯೋಣ. ಇಂದೇ ರಿಜಿಸ್ಟರ್ ಮಾಡಿ:
www.akkaonline.org

ಕಾರ್ಯಕ್ರಮ ಮುಗಿಯುವ ಹೊತ್ತಿಗೆ ಮತ್ತೊಂದೆಡೆ ಕಲ್ಲಂಗಡಿ, ಮಜ್ಜಿಗೆ, ಮಾವಿನ ರಸದ ಸರಬರಾಜು ನಡೆಯುತ್ತಿತ್ತು. ಮತ್ತೊಮ್ಮೆ ಬಿಸಿ ಬಿಸಿ ಬಜ್ಜಿ, ಬೋಂಡಾ, ಉಪ್ಪಿಟ್ಟು, ಸಪೋಟ, ಕೇಸರಿ ಬಾತ್ ಮುಗಿಸಿ, RCB IPL ಕಪ್ ಕೇಕ್ ಕತ್ತರಿಸುವುದರ ಮೂಲಕ ವಿಶೇಷವಾಗಿ ಆಚರಿಸಿದರು. ಪಿಕ್ನಿಕ್‌ನಲ್ಲಿ ಗೆದ್ದ ಎಲ್ಲ ಸ್ಪರ್ಧಿಗಳಿಗೂ ಬೃಂದಾವನ ಬಹುಮಾನ ವಿತರಿಸುವುದರೊಂದಿಗೆ ಕಾರ್ಯಕ್ರಮಕ್ಕೆ ತೆರೆ ಬಿದ್ದಿತು.

ಈ ಬಾರಿಯ ಕ್ರೀಡೆಯಲ್ಲಿ ಭಾರತ T-20 ಕ್ರಿಕೆಟ್ ಕಪ್ ಗೆಲ್ಲುವುದರ ಮೂಲಕ ಮತ್ತೊಮ್ಮೆ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿತು. ಈ ಬಾರಿ IPLನಲ್ಲಿ ವೈಭವ್ ಸೂರ್ಯವಂಶಿ ಮತ್ತೊಮ್ಮೆ ಕ್ರೀಡಾಂಗಣದಲ್ಲಿ ಸಿಕ್ಸರ್ ಸುರಿಮಳೆ ತರಿಸಿ, ಕ್ರಿಕೆಟ್‌ನಲ್ಲಿ ಭಾರತಕ್ಕೆ ಉತ್ತಮ ಭವಿಷ್ಯದ ಮುನ್ಸೂಚನೆ ನೀಡಿದರು. ಮತ್ತೊಮ್ಮೆ ಬೆಂಗಳೂರಿನ ತಂಡ RCB ಕಪ್ ಗೆಲ್ಲುವುದರ ಮೂಲಕ, ತಾವು ಕಳೆದ ಬಾರಿ ಗೆದ್ದಿದ್ದು ಬರೀ ಅದೃಷ್ಟ ಅಲ್ಲ ಎಂದು ಮತ್ತೊಮ್ಮೆ ಸಾಬೀತುಪಡಿಸಿತು. ಈ ಬಾರಿಯೂ ನಮ್ಮದೇ ಕಪ್ ಎಂದು ವಿಶೇಷ ರೀತಿಯಲ್ಲಿ ಸಾಬೀತುಪಡಿಸಿತು. RCBಗೆ ಮೊದಲ IPL ಹ್ಯಾಟ್ರಿಕ್ ಸಿಗಲಿ ಎಂದು ಬೃಂದಾವನ ಹಾರೈಸುತ್ತದೆ.

ಎಲ್ಲ ಕ್ರಿಕೆಟ್ ಭರದ ಮಧ್ಯೆ ಫುಟ್‌ಬಾಲ್ ಫೀವರ್ ಶುರುವಾಗಿದೆ. US-ಮೆಕ್ಸಿಕೋ ಹಾಗೂ ಕೆನಡಾ ಸಹ ಭಾಗಿತ್ವದಲ್ಲಿ 48 ತಂಡಗಳೊಂದಿಗೆ ಪ್ರಾರಂಭವಾಗಿ ಈಗ 32 ತಂಡಗಳಿಗೆ ಬಂದಿದೆ. ಮೆಸ್ಸಿ, ರೊನಾಲ್ಡೊ, ಎಂಬಾಪೆ – ಎಲ್ಲರ ರೋಚಕ ಗೋಲುಗಳನ್ನು ನೋಡಲು ಈ ಸಂದರ್ಭದಲ್ಲಿ ಮರೆಯಬೇಡಿ.

ಮತ್ತೊಮ್ಮೆ ಮುಂದಿನ ಸಂಚಿಕೆಯಲ್ಲಿ ಭೇಟಿಯಾಗೋಣ.

ನಿಮ್ಮ,
**ಸುನೇಲ್ ಹುಲಿಕೆರೆ**,
ಅಧ್ಯಕ್ಷರು,
"ಸಂಕಲ್ಪ ತಂಡ",
ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ.



**ಶ್ರೀ ಯೋಗೀಂದ್ರ ಭಟ್ ಉಳಿ**
ಶ್ರೀ ಕೃಷ್ಣ ವೃಂದಾವನ, ನ್ಯೂ ಜೆರ್ಸಿ

# ನೈಜ ಶಿಕ್ಷಣ

**ಪ್ರ**ಸ್ತುತ ಶಾಲಾ ಶಿಕ್ಷಣವು ನಿಜವಾಗಿಯೂ ನಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿಸುತ್ತಿದೆಯೇ? ಕೇವಲ ಸ್ಪರ್ಧಾತ್ಮಕ ಪರೀಕ್ಷೆಗಳು ಮಕ್ಕಳಿಗೆ ಯಾವ ಜೀವನೋಪಾಯವನ್ನು ಹೇಳಿಕೊಡುತ್ತವೆ? ಮಕ್ಕಳನ್ನು ಕೇವಲ ಪರೀಕ್ಷೆಗೆ ತಯಾರುಗೊಳಿಸುವುದಷ್ಟೇ ತಮ್ಮ ಕರ್ತವ್ಯ ಎಂದು ಭಾವಿಸುತ್ತಿರುವ ಶಾಲೆಗಳು ನಿಜವಾಗಿಯೂ ನಮ್ಮ ಮಕ್ಕಳನ್ನು ಉದ್ಧರಿಸಬಲ್ಲವೇ? ಹಾಗೆಯೇ ಮಕ್ಕಳು ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಗಳಿಸಿದ ಮಾತ್ರಕ್ಕೆ ಹೆತ್ತವರ ಜೀವನ ಪಾವನವಾಗಿಬಿಡುತ್ತದೆಯೇ? ಮಕ್ಕಳ ವಿದ್ಯಾಭ್ಯಾಸಕ್ಕೆ ಭಾರೀ ಮಹತ್ವ ಕೊಡುತ್ತಿರುವ ಆಧುನಿಕ ಪೋಷಕರು ಹೀಗೆ ಗಂಭೀರವಾಗಿ ಯೋಚಿಸಬೇಕಾದ ಕಾಲಬಂದಿದೆ.

ಈಗಿನ ಕಾಲದ ಮಕ್ಕಳಿಗೆ ಶಾಲೆಯನ್ನು ಬಿಟ್ಟು ಬೇರೆ ಬದುಕೇ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ದಿನ ನಿತ್ಯ ಸ್ಕೂಲ್ ಬಸ್, ರೆಗ್ಯುಲರ್ ಕ್ಲಾಸ್, ಸ್ಪೆಷಲ್ ಕ್ಲಾಸ್, ಹೋಮ್ ವರ್ಕ್, ಪ್ರಾಜೆಕ್ಟ್ ಬಿಟ್ಟರೆ ಬೇರೆ ಯಾವ ಚಟುವಟಿಕೆಗಳಿಗೆ ಅವಕಾಶವಿದೆ? ಮಕ್ಕಳು ಬಿಡಿ, ಹೆತ್ತವರೂ ಸಹ ಈಗ ಈ ಯಾಂತ್ರಿಕತೆಯಿಂದ ಹೊರತಾದ ನೈಜ ಬದುಕನ್ನು ಸವಿಯಲು ಶಾಲೆಯ ರಜಾ ದಿನವ ನ್ನೇ ಕಾತರದಿಂದ ಕಾಯುವಂತಾಗಿದೆ. ಮಕ್ಕಳಿಗೆ ಬೇಕಾದ ಯುನಿಫಾರ್ಮ್, ಶಾಲಾ ಶುಲ್ಕ, ಪಿಕ್ ಅಪ್, ಡ್ರಾಪ್ ಆಫ್ , ಟಿಫಿನ್ ಬಾಕ್ಸ್, ಶಾಪಿಂಗ್, ಪ್ರಾ ಜೆಕ್ಟ್ ಅಸಿಸ್ಟೆನ್ಸ್, ಸ್ಕೂಲ್ ಮೀಟಿಂಗ್ಸ್ ಇತ್ಯಾದಿಗಳಲ್ಲೇ ಪೋಷಕರ ಜೀವನ ಮತ್ತು ಸಮಯವೂ ಕಳೆದು ಹೋಗುತ್ತಿದೆ. ಇದೊಂದು ರೀತಿ, ನಾವೇ ಕೃತಕ ಒತ್ತಡವನ್ನು ಸೃಷ್ಟಿಸಿಕೊಂಡು ಅನಗತ್ಯವಾಗಿ ಒದ್ದಾಡುವಂತೆ ಮತ್ತು ದೈವದತ್ತವಾದ ನಮ್ಮ ಸಾಂಸಾರಿಕ ಜೀವನವನ್ನು ನಾವೇ ಅಲ್ಪಾವಧಿಗೆ ಸೀಮಿತಗೊಳಿಸಿಕೊಂಡಂತೆ ಆಗಲಿಲ್ಲವೇ? ಪ್ರಸ್ತುತ ನಮ್ಮ ಜೀವನಕ್ಕೆ ಹೋಲಿಸಿದರೆ ಬಹುಶಃ ಪ್ರಾಣಿ ಪಕ್ಷಿಗಳೇ ನಮಗಿಂತ ಎಷ್ಟೋ ನೆಮ್ಮದಿಯಿಂದ ಬದುಕುತ್ತಿವೆ ಎಂದು ಕಾಣುತ್ತದೆ.

ಮತ್ತೆ ನೋಡಿದರೆ ನಮ್ಮ ಮಕ್ಕಳಿಗ ಕೃಷಿ, ಅಡುಗೆ, ಮನೆ ಕೆಲಸ ಮತ್ತು ಪರಂಪರಾಗತ ವೃತ್ತಿ ಕೌಶಲ್ಯಗಳ ಬಗ್ಗೆ ಯಾವುದೇ ಅನುಭವವಿಲ್ಲದೆ ಬೆಳೆಯುತ್ತಿದ್ದಾರೆ. ಅವುಗಳ ಬಗ್ಗೆ ಆಸಕ್ತಿ ಇದ್ದವರೂ ಸೂಕ್ತ ಸಮಯಾವಕಾಶ ಸಿಗದೆ ಅವಕಾಶ ವಂಚಿತರಾಗುತ್ತಿದ್ದಾರೆ. ಅದರ ಪರಿಣಾಮ ನೋಡಿ, ಎಷ್ಟೋ ಪ್ರಾಚೀನ ವೃತ್ತಿ ಕೌಶಲ್ಯಯಗಳನ್ನು ಮುಂದುವರಿಸುವವರೇ ಇಲ್ಲದಂತಾಗಿದೆ. ಕನ್ ಸ್ಟ್ರಕ್ಷನ್ ನಿಂದ ಹಿಡಿದು ಕೃಷಿ, ಹೈನುಗಾರಿಕೆಯ ತನಕದ ಎಲ್ಲ ಕೆಲಸಗಳಿಗೂ ನಮ್ಮ ಜನರು ಲಭ್ಯವಿಲ್ಲದಿರುವುದರಿಂದ ಅನ್ಯಪ್ರದೇಶೀಯ, ವಿದೇಶಿಯ ಕಾರ್ಮಿಕರನ್ನೇ ಬಳಸಿಕೊಳ್ಳುವಂತಾಗಿದೆ . ಅಡುಗೆಯೇ ಗೊತ್ತಿಲ್ಲದ ಎಷ್ಟೋ ಮಂದಿ ಉದ್ಯೋಗಸ್ಥ ಯುವಕ, ಯುವತಿಯರು ಹೊಟ್ಟೆತುಂಬಿಸಲು ಮೂರೂ ಹೊತ್ತು ಬೇರೆಯವರು ಲಾಭ ದೃಷ್ಟಿ ಇಟ್ಟು ಮಾಡಿದ ಅಡುಗೆ ಯನ್ನು ಅವಲಂಬಿಸಿದ್ದಾರೆ.

ಶಾಲೆಯಲ್ಲಿ ನಮ್ಮ ಮಕ್ಕಳು ಕಲಿಯುವ ಎಷ್ಟೋ ಪಠ್ಯ ಪುಸ್ತಕಗಳು ಅತ್ಯಂತ ಅಪ್ರಸ್ತುತ ಮತ್ತು ಮುಂದಿನ ಜೀವನಕ್ಕೆ ಯಾವ ರೀತಿಯಿಂದಲೂ ಉಪಯೋಗವಿಲ್ಲದ್ದು ಎನ್ನುವುದು ಕೂಡ ನಮಗೆಲ್ಲರಿಗೂ ಗೊತ್ತಿದೆ. ಆದರೇನು ಮಾಡೋಣ? ಅದನ್ನು ಪ್ರಶ್ನಿಸುವವರು ಯಾರೂ? ಸರಿಪಡಿಸುವವರು ಯಾರು? ಅದಲ್ಲದೆ ನಾವು ಈಗ ನಮಗೋಸ್ಕರ ಬದುಕುತ್ತಿಲ್ಲವಲ್ಲ! ಈ ಸೋಶಿಯಲ್ ಪ್ರೆಷರ್ ಅನ್ನುವ ಪೆಡಂಭೂತ ನಮ್ಮನ್ನು ಸ್ವಂತಿಕೆಯೇ ಇಲ್ಲದಂತೆ ಮಾಡಿಬಿಟ್ಟಿದೆ. ಈ ಸಮಾಜದಲ್ಲಿ ಎಲ್ಲರೂ ಮಾಡುವಂತೆ ನಾವೂ ಮಾಡಬೇಕಾದ ಅನಿವಾರ್ಯತೆಯಿದೆ. ನಾವೇನಾದರೂ ಸ್ವಲ್ಪ ಭಿನ್ನವಾಗಿ ಯೋಚಿಸಿದೆವೆಂದರೆ ಹತ್ತಾರು ಜನ ನಮ್ಮವರೇ ಬಂದು ನಮ್ಮ ತಲೆತಿಂದು ನಮ್ಮನ್ನು ಕನ್ ಫ್ಯೂಸ್ ಮಾಡಿ ಬಿಡುತ್ತಾರೆ. ಹೆದರಿಸಿಬಿಡುತ್ತಾರೆ. ನಮ್ಮ ಮಕ್ಕಳ ಭವಿಷ್ಯ ಹಾಳಾಗಬಾರದು ಎಂಬ ಭಯ ಎಲ್ಲ ಪೋಷಕರಿಗೂ ಇದ್ದೇ ಇರುತ್ತದೆ. ಆದರೂ ಸ್ವಲ್ಪ ಯೋಚನೆ ಮಾಡಿ ಜಾಗ್ರತೆಯಿಂದ ನಮ್ಮ ಜೀವನಕ್ರಮವನ್ನು ಬದಲಾಯಿಸಲೇ ಬೇಕಾದ ಅನಿವಾರ್ಯತೆ ಈಗ ಖಂಡಿತವಾಗಿಯೂ ನಮ್ಮ ಮುಂದಿದೆ.

ಮನೆಯಿಂದ ದೂರವಿರುವ ಮತ್ತು ಹೋಮ್ ವರ್ಕ್ ಇತ್ಯಾದಿ ಒತ್ತಡಗಳೊಂದಿಗೆ ವಿಪರೀತವಾಗಿ ಮಕ್ಕಳನ್ನು ದಂಡಿಸುವ ಸ್ಪರ್ಧಾತ್ಮಕ ಶಾಲೆಗಳಿಗೆ ಮಕ್ಕಳನ್ನು ಸೇರಿಸಲೇಬಾರದು. ನಮ್ಮ ಪರಂಪರಾನು ಗತವಾದ ವೃತ್ತಿ ಕೌಶ ಲ್ಯಗಳಿಗೆ ಇರುವ ಗೌರವ ಮತ್ತು ಮಹತ್ವವನ್ನು ನಮ್ಮ ಮಕ್ಕಳಿಗೆ ನಾವೇ ಹೇಳಿಕೊಡಬೇಕು. ನಮ್ಮ ಮನೆತನ, ಪೂರ್ವಿಕರ ವೃತ್ತಿ ಇತ್ಯಾದಿಗಳಲ್ಲಿ ನಮ್ಮ ಮಕ್ಕಳಿಗೆ ಹೆಮ್ಮೆ ಮತ್ತು ಅಭಿಮಾನ ಬರುವಂತೆ ಮಾಡಬೇಕು. ನಮ್ಮ ಧಾರ್ಮಿಕ ಆಚರಣೆಗಳು ಮತ್ತು ನಾವು ಮಾಡುವ ಮನೆಗೆಲಸ, ಕೃಷಿ, ಹೂವು ತೋಟ, ಅಡುಗೆ ಇತ್ಯಾದಿಗಳಲ್ಲಿ ಮಕ್ಕಳನ್ನು ಕಡ್ಡಾಯವಾಗಿ ತೊಡಗಿಸಿಕೊಳ್ಳಬೇಕು. ಬಂಧು ಮಿತ್ರರ ಮನೆಯ ಸಮಾರಂಭಗಳಲ್ಲಿ ಭಾಗವಹಿಸುವ, ಸಹಕಾರನೀಡುವ ಕಾರ್ಯಗಳಲ್ಲಿಯೂ ನಮ್ಮ ಮಕ್ಕಳನ್ನು ಸೇರಿಸಿಕೊಳ್ಳಬೇಕು. ಒಟ್ಟಿನಲ್ಲಿ ಸಹಜ ಬದುಕಿಗೆ ಹೆಚ್ಚಿನ ಪ್ರಾಮುಖ್ಯವನ್ನು ನೀಡಬೇಕು ಮತ್ತು ಮುಖ್ಯವಾಗಿ ಮಕ್ಕಳಿಗೆ ಶಾಲಾ ಶಿಕ್ಷಣವೇ ಪ್ರಧಾನ ಉಳಿದದ್ದೆಲ್ಲವೂ ಗೌಣ ಎನ್ನುವ ಭ್ರಮೆಯಿಂದ ನಾವು ಹೊರಗೆ ಬರಬೇಕು.



**ಶ್ರೀವತ್ಸ ಬಲ್ಲಾಳ**
ಪೆನ್ಸಿಲ್ವೇನಿಯಾ

# ಪುತ್ತಿಗೆ ಶ್ರೀಗಳ ಪುರಪ್ರವೇಶ, ಪೌರ ಸನ್ಮಾನ ಮತ್ತು ಗುರುವಂದನೆ



**ಎ**ಡಿಸನ್, ನ್ಯೂ ಜೆರ್ಸಿ, ಅಮೆರಿಕಾ: ದಿನಾಂಕ ಜೂನ್ ೭, ೨೦೨೬ ರಂದು ಪುತ್ತಿಗೆ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರ ಪುರ ಪ್ರವೇಶ ಮತ್ತು ಪೌರ ಸನ್ಮಾನ ಎಡಿಸನ್ ಶ್ರೀ ಕೃಷ್ಣ ವೃಂದಾವನದ ಸಭಾಂಗಣದಲ್ಲಿ ವಿಜೃಂಭಣೆಯಿಂದ ನೆರವೇರಿತು. ಶ್ರೀ ಶ್ರೀ ಸುಗುಣೇಂದ್ರ ತೀರ್ಥರಿಗೆ ತಮ್ಮ ಎರಡು ವರ್ಷ ಪರ್ಯಾಯಾವಧಿಯನ್ನು ಪೂರೈಸಿದ ಬಳಿಕದ ಮೊದಲ ಅಮೆರಿಕಾ ಭೇಟಿ ಇದಾಗಿದೆ. ಇದಕ್ಕೂ ಮುನ್ನ ಶ್ರೀಗಳು ಲಂಡನ್ ಹಾಗೂ ಕೆನಡಾದ ಟೊರಂಟೋದಲ್ಲಿರುವ ತಮ್ಮ ಮಠಗಳಿಗೆ ಭೇಟಿ ಇತ್ತು ಅಮೆರಿಕಾ ಪ್ರವೇಶಿಸಿದ್ದರು.

ಅಧಿಕ ಮಾಸದ ಪರ್ವ ಕಾಲದಲ್ಲಿ ಶ್ರೀಗಳ ಭೇಟಿಯನ್ನು ತೀವ್ರ ಕಾತರದಿಂದ ಎದುರು ನೋಡುತ್ತಿದ್ದ ಅಮೆರಿಕಾದ ಪೂರ್ವ ಕರಾವಳಿಯ ಭಕ್ತರು ಶ್ರೀಗಳ ಅನಿರೀಕ್ಷಿತ ಭೇಟಿಯಿಂದ ಸಂತಸಗೊಂಡದಕ್ಕೆ ನೆರೆದಿದ್ದ ಸುಮಾರು ಐದುನೂರಕ್ಕೂ ಹೆಚ್ಚು ಸಂಖ್ಯೆಯಲ್ಲಿದ್ದ ಭಕ್ತರೇ ಸಾಕ್ಷಿ. ಯತಿಕುಲ ಚಕ್ರವರ್ತಿ ಎಂದು ನಾಮಾಂಕಿತಗೊಂಡ ಶ್ರೀಗಳಿಗೆ ಎಡಿಸನ್ ನಗರದ ಹೃದಯ ಭಾಗದಲ್ಲಿರುವ ರಸ್ತೆಗಳಲ್ಲಿ ಕುದುರೆ ಸಾರೋಟು, ಪೂರ್ಣ ಕುಂಭ, ಸ್ಯಾಕ್ಸೋಫೋನ್, ಕೊಳಲು, ಡೋಲಕ, ಕೋಲಾಟ ನೃತ್ಯ ಮತ್ತು ವೇದ ಘೋಷದೊಂದಿಗೆ ಶ್ರೀ ಕೃಷ್ಣ ವೃಂದಾವನದ ಆವರಣಕ್ಕೆ ಕರೆದುಕೊಂಡು ಬಂದಿತು. ಯತಿಕುಲ ಚಕ್ರವರ್ತಿಗಳಿಗೆ ಜಯವಾಗಲಿ, ಸುಗುಣೇಂದ್ರ ತೀರ್ಥರಿಗೆ ಜಯವಾಗಲಿ ಎನ್ನುವ ಉದ್ಗಾರ ಮುಗಿಲುಮುಟ್ಟುತ್ತಿದ್ದಂತೆಯೇ ಸಾರೋಟಿನಿಂದ ಕೆಳಗಿಳಿದ ಶ್ರೀಗಳು ಅರಳು ಮತ್ತು ಪುಷ್ಪವೃಷ್ಟಿಯ ನಡುವೆ ತಮ್ಮ ಅತ್ಯಂತ ನೆಚ್ಚಿನ ಮಠ, ಅಮೆರಿಕಾದಲ್ಲಿ ಧರ್ಮಸಂಸ್ಥಾಪನೆಯ ಅಡಿಗಲ್ಲನ್ನು ಹಾಕಲು ಸಹಕರಿಸಿದ ಎಲ್ಲ ಭಕ್ತರೆದುರು ಮುಗುಳ್ನಗುತ್ತಾ ಶಾಲಗ್ರಾಮ ಶಿಲಾರೂಪಿ ಶ್ರೀ ಕೃಷ್ಣನನ್ನು ದರ್ಶನ ಮಾಡಿದರು. ಕೃಷ್ಣನಿಗೆ ಆರತಿ ಬೆಳಗಿದ ಬಳಿಕ ಶ್ರೀಗಳನ್ನು ಪ್ರಸನ್ನಾಚಾರ್ಯರು ಮತ್ತು ಯೋಗೀನ್ದ್ರ ಭಟ್ಟರ ಕೈಹಿಡಿದು ಆನಂದತೀರ್ಥ ಮಂಟಪದಲ್ಲಿರುವ ವೇದಿಕೆಗೆ ಕರೆದೊಯ್ದು ಸಿಂಹಾಸನದಲ್ಲಿ ಕುಳ್ಳಿರಿಸಿದರು.




ಮಠದ ಮತ್ತು ಯೋಗೀನ್ದ್ರ ಭಟ್ಟರ ಮಾರ್ಗದರ್ಶನದಲ್ಲಿ ಪಾಠ ಕಲಿಯುತ್ತಿರುವ ವಿದ್ಯಾರ್ಥಿಗಳಿಂದ ವೇದಘೋಷ ಮತ್ತು ಮಠದ ಯುವತಂಡದ ಸದಸ್ಯರಿಂದ ಉಡುಪಿಯ ಕಂಡೀರಾ ಕೃತಿಯ ಅಕಪೆಲ್ಲ ಶೈಲಿಯ ಪ್ರಸ್ತುತಿಯ ಬಳಿಕ ಶ್ರೀವತ್ಸ ಬಲ್ಲಾಳರ ಪ್ರಸ್ತಾವನೆ, ಯೋಗೀನ್ದ್ರ ಭಟ್ಟರ ಸ್ವಾಗತ ಶ್ರೀಗಳನ್ನು ಹೃದಯಸ್ಪರ್ಶಿಯಾಗಿ ಮತ್ತೊಮ್ಮೆ ಅಮೆರಿಕಾದ ಮಣ್ಣಿಗೆ, ನ್ಯೂ ಜೆರ್ಸಿ ಕ್ಷೇತ್ರಕ್ಕೆ ಆತ್ಮೀಯವಾಗಿ ಬರಮಾಡಿಕೊಂಡಿತು. ನಂತರ ಮಹೇಶ್ ಹರವು ಶ್ರೀಗಳ ಪೌರ ಸನ್ಮಾನದ ಪ್ರಸ್ತಾವನೆಯನ್ನು ಮುಂದಿಟ್ಟು, ಶ್ರೀಗಳ ಸಾಧನೆಯನ್ನು ಕೊಂಡಾಡಿದರು.





ಮಠದ ಆವರಣಕ್ಕೆ ಸುಮಾರು ಮೂರು ವರುಷಗಳ ಬಳಿಕ ಮರಳುತ್ತಿದ್ದಾಗ ಹೇಗೆ ಶ್ರೀಗಳ ಮುಖದಲ್ಲಿ ಧನ್ಯತೆಯ, ತೃಪ್ತಿಯ ಭಾವವಿತ್ತು ಎನ್ನುವ ಸೂಕ್ಷ್ಮವಾದ ಎಳೆಯನ್ನು ಭಕ್ತರೆದುರು ತೆರೆದಿಟ್ಟಾಗ ಸಭಾಗಣದಲ್ಲಿ ಕಿವಿಗಡುಚಿಕ್ಕುವ ಕರತಾಡನ. ನ್ಯೂ ಜೆರ್ಸಿಯ ಮೊಂಟುಗೊಮೆರಿ ಪಟ್ಟಣದ ಮೇಯರ್ ನೀನಾ ಸಿಂಗ್ ಮತ್ತು ಪತಿ ಪರಂಜಿತ್ ಸಿಂಗ್ ವಿಶೇಷ ಅತಿಥಿಗಳಾಗಿ ಆಗಮಿಸಿ ಪೌರ ಸನ್ಮಾನಕ್ಕೆ ಸ್ಥಳೀಯ ಸರಕಾರದ ಸಂಪೂರ್ಣ ಸಹಕಾರ ಬೆಂಬಲವನ್ನು ತೋರಿದ್ದು ಶ್ರೀಗಳಿಗೆ ಅಮೆರಿಕಾದ ಜನತೆ ತೋರಿದ ಗೌರವಕ್ಕೆ ಹಿಡಿದ ಕನ್ನಡಿ. ಸನ್ಮಾನ ಪತ್ರವನ್ನು ವಾಚಿಸಿದ ಮೇಯರ್ ನೀನಾ ಸಿಂಗ್ ಪತ್ರ ಮತ್ತು ಫಲಕವನ್ನು ಶ್ರೀಗಳಿಗೆ ಇತ್ತು ಫಲ ಮಂತ್ರಾಕ್ಷತೆಯನ್ನು ಸ್ವೀಕರಿಸಿದರು.

ಶ್ರೀಗಳ ಮತ್ತು ಶ್ರೀಮಠದ ಶಿಷ್ಯರು ಹಾಗೂ ಮಹಾದಾನಿಗಳೂ ಆದ ಡಾ ಸುಧೀಂದ್ರ, ಪೂರ್ಣಿಮಾ ಸುಧೀಂದ್ರ , ಉದ್ಯಮಿ ಸುರೇಶ ವಸಿಷ್ಠ, ಮೀನಾ ವಸಿಷ್ಠ, ನ್ಯೂಯಾರ್ಕಿನಲ್ಲಿರುವ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಅತ್ಯುನ್ನತ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಚೇತನ್ ಭರ್ಗಿರಿ ಅವರು ಶ್ರೀಗಳಿಗೆ ಶಾಲು, ಹಾರ ಮತ್ತು ಪೇಟವನ್ನು ತೊಡಿಸಿ ಪುಷ್ಪವೃಷ್ಟಿಯ ನಡುವೆ ಶ್ರೀಗಳಿಗೆ ಸನ್ಮಾನವನ್ನು ಅತ್ಯಂತ ಭಾವುಕರಾಗಿ ನಡೆಸಿಕೊಟ್ಟರು. ಡಾ ಸುಧೀಂದ್ರ ಅವರು ಶ್ರೀಗಳ ಕಳೆದ ಮೂರು ದಶಕಗಳ ಫಲಬಿಡದ ತ್ರಿವಿಕ್ರಮನಂತೆ ನಡೆಸಿದ ಸಾಧನೆಯನ್ನು ಕೊಂಡಾಡಿ ಶ್ರೀಗಳ ಎಲ್ಲ ಕೆಲಸಗಳಿಗೂ ತಮ್ಮ ಮತ್ತು ಅಮೆರಿಕಾ ಭಾಗದ ಭಕ್ತರ ನಿಸ್ವಾರ್ಥ ಸಹಕಾರವನ್ನು ಮತ್ತೊಮ್ಮೆ ಶ್ರೀಗಳೆದುರು ವ್ಯಕ್ತಪಡಿಸಿದರು.



ಭಗವದ್ಗೀತೆಯ ಹನ್ನೆರಡನೇ ಅಧ್ಯಾಯದ ಪಠಣದ ನಡುವೆ ನಡೆದ ಪೌರ ಸನ್ಮಾನಕ್ಕೆ ಉತ್ತರಿಸಿದ ಶ್ರೀಗಳು, ಸುಧೀರ್ಘ ಎರಡೂವರೆ ವರ್ಷದ ಬಳಿಕ ಅಮೆರಿಕಾದ ನ್ಯೂಜೆರ್ಸಿ ಕ್ಷೇತ್ರಕ್ಕೆ ಮರಳಿದ್ದು ತಮಗೆ ತವರು ಮನೆಗೆ ಬಂದಷ್ಟೇ ಸಂತೋಷವಾಗಿದೆ ಎಂದು ಅತ್ಯಂತ ಪ್ರೀತಿಯಿಂದ ತಮ್ಮ ಭಕ್ತರನ್ನು ಸಂತಸದ ಪರಾಕಾಷ್ಠೆಗೆ ಕರೆದೊಯ್ದರು. ತನ್ನ ಚತುರ್ಥ ಪರ್ಯಾವಧಿಯಲ್ಲಿ ಪಡೆದ, ಕ್ರೋಡೀಕರಿಸಿದ ಪುಣ್ಯವನ್ನೆಲ್ಲ ಇದೀಗ ಜಗತ್ತಿನ್ನೆಲ್ಲೆಡೆ ಇರುವ ಕೃಷ್ಣ ಭಕ್ತರಿಗೆ ಹಂಚಲು ಬಂದಿದ್ದೇನೆ, ಭಕ್ತಿಯನ್ನು ಇತ್ತು ಭಕ್ತಿಯನ್ನು ಪಡೆಯಿರಿ ಎನ್ನುವ ವಿಶೇಷ ಸಂದೇಶವನ್ನು ಕೂಡ ಶ್ರೀಗಳು ನೀಡಿದರು. ಗೀತೆಯ ಮಹತ್ವವನ್ನು ಮನದಟ್ಟುಗೊಳಿಸುತ್ತಾ ಶ್ರೀಗಳು ತಮ್ಮ ಕೋಟಿ ಗೀತಾ ಲೇಖನ ಯಜ್ಞವನ್ನು ತಮ್ಮ ಪಂಚಮ ಪರ್ಯಾಯಾವಧಿಯವರೆಗೂ ಮುಂದುವರಿಸುವುದಾಗಿ ತಿಳಿಸಿ, ಹೇಗೆ ಹಲವಾರು ಭಕ್ತರು ಗೀತಾ ಲೇಖನದಿಂದ ತಮ್ಮ ಜೀವನದ ಪಥವನ್ನೇ ಬದಲಿಸಿಕೊಂಡಿರುವುದಾಗಿ ಉದಾಹರಿಸಿ ನೆರೆದಿದ್ದ ಭಕ್ತರನ್ನೆಲ್ಲ ಭಕ್ತಿಯ ಕಡಲಲ್ಲಿ ಮಿಂದೇಳುವಂತೆ ಮಾಡಿದರು. ತಮ್ಮ ಮುಂದಿರುವ ಯೋಜನೆಗಳ ಬಗ್ಗೆ ಸೂಕ್ಷ್ಮ ನೋಟವನ್ನು ಹರಿಸಿದ ಶ್ರೀಗಳು ಯಜ್ಞಶಾಲೆಯ ಬಗ್ಗೆ ಶ್ರೀ ಮಠದ ಶಿಷ್ಯರು ವಿವರವಾದ ಮಾಹಿತಿಯನ್ನು ನೀಡುವ ಸೂಚನೆಯನ್ನಿತ್ತರು.

ಶ್ರೀಮಠದ ಶಿಷ್ಯರೂ ಮಹಾದಾನಿಗಳೂ ಆದ ಚೇತನ್ ಭರ್ಗಿರಿ ಅವರು ಯಜ್ಞಶಾಲೆಯ ಪ್ರಗತಿ ಪತ್ರ ಮಂಡಿಸಿ ಇಲ್ಲಿಯವರೆಗೂ ನಡೆದ ಮತ್ತು ಮುಂದೆ ನಡೆಯಬೇಕಾದ ಕೆಲಸದ ಬಗ್ಗೆ ಚಿತ್ರ ಸಹಿತ ವರದಿಯನ್ನು ಸಲ್ಲಿಸಿದರು. ಸುಮಾರು ಒಂದು ಮಿಲಿಯಕ್ಕೂ



ಅಧಿಕ ಡಾಲರ್ ವೆಚ್ಚದ ಈ ಯೋಜನೆಗೆ ಇಲ್ಲಿಯವರೆಗೆ ಹರಿದುಬಂದಿರುವ ಐದುನೂರು ಸಾವಿರದಷ್ಟು ಧನ ಸಹಾಯ ಮತ್ತು ಇನ್ನೂ ಬೇಕಾಗಿರುವ ದೇಣಿಗೆಯ ಬಗ್ಗೆ ಭಕ್ತರೆದುರು ಕಳಕಳಿಯ ಮನವಿಯನ್ನು ಸಲ್ಲಿಸಿದರು. ಸ್ವತಃ ಚೇತನ್ ಭರ್ಗಿರಿಯವರೂ ಸೇರಿದಂತೆ ಡಾ ಸುಧೀಂದ್ರ, ಸುರೇಶ ವಶಿಷ್ಠ ಮತ್ತು ಇನ್ನೊಬ್ಬ ಅನಾಮಧೇಯರಾಗಿ ಉಳಿಯಲು ಇಚ್ಛಿಸಿದ ಮಹಾದಾನಿಗಳನ್ನು ಶ್ರೀ ಮಠದ ಪರವಾಗಿ ಕಾರ್ಯಕ್ರಮದ ಆಯೋಜಕ ಶ್ರೀವತ್ಸ ಬಲ್ಲಾಳರು ಗುರುತಿಸಿ ವಂದನೆಯನ್ನು ಸಲ್ಲಿಸಿದರು.

ಸನ್ಮಾನ ಕಾರ್ಯಕ್ರಮದ ಕೊನೆಯ ಅಂಗವಾಗಿ ಶ್ರೀಮಠದ ಅಂತಾರಾಷ್ಟ್ರೀಯ ಕಾರ್ಯದರ್ಶಿ ಪ್ರಸನ್ನಾಚಾರ್ಯ ವಂದನಾರ್ಪಣೆಗೈದರು. ಶ್ರೀಗಳ ಮಹದಾಕಾಂಕ್ಷೆಯ ಜಗತ್ತಿನಾದ್ಯಂತ ಕಟ್ಟಿ ಬೆಳೆಸಲಿರುವ ನೂರೆಂಟು ಕೃಷ್ಣಮಂದಿರದ ಯೋಜನೆಯನ್ನು ನನಸಾಗಿಸುವ ಎಲ್ಲ ಪ್ರಯತ್ನವನ್ನು ನಡೆಸುವುದಾಗಿ ಪ್ರಾಮಾಣಿಕ ಸಹಕಾರವನ್ನು ಶ್ರೀಗಳಿಗೆ ತೋರಿ ಅವರ ಆಶೀರ್ವಾದವನ್ನು ಬೇಡುತ್ತಾ ಇಲ್ಲಿಯವರೆಗೆ ಬಂದು ಆಶೀರ್ವದಿಸಿದ್ದಕ್ಕೆ ವಂದನೆಯನ್ನು ತಿಳಿಸಿ ಕಾರ್ಯಕ್ರಮಕ್ಕೆ ಮಂಗಳವನ್ನಿತ್ತರು.

ಕಾರ್ಯಕ್ರಮದ ಬಳಿಕ ಶಾಲಗ್ರಾಮ ಶಿಲಾರೂಪಿ ಕೃಷ್ಣನ ಎದುರು ನಡೆದ ಭಜನೆ, ಚಾಮರ ಸೇವೆ, ಮಹಾಪೂಜೆ, ಶ್ರೀಗಳ ಆಶೀರ್ವಚನ, ತೀರ್ಥ ಮತ್ತು ಫಲ ಮಂತ್ರಾಕ್ಷತೆ ಬಳಿಕ ರಾತ್ರಿಯ ಭೋಜನ ಪ್ರಸಾದದ ಬಳಿಕ ನೆರೆದಿದ್ದ ಭಕ್ತರೆಲ್ಲರೂ ತೆರಳಿದರು. ಇಂದು ಸೋಮವಾರ ಬೆಳಗ್ಗೆ ಏಳಕ್ಕೆ ಸರಿಯಾಗಿ ಮಠದ ಆವರಣದಲ್ಲಿ ತಪ್ತ ಮುದ್ರಾಧಾರಣೆಯೂ ನಡೆಯಲಿದೆ ಎಂದು ಶ್ರೀಮಠದ ಪ್ರಕಟಣೆ ತಿಳಿಸಿದೆ.



**ಡಾ ಎ ಕೇಶವರಾಜ್**
ಇಂಡಿಯಾನ

# ನ್ಯೂಜೆರ್ಸಿಯಲ್ಲಿ ಬನ್ನಂಜೆ ೯೦ ವಿಶ್ವನಮನ ಕಾರ್ಯಕ್ರಮ

**ಖ್ಯಾ**ತ ವಿದ್ವಾಂಸ, ಪ್ರಖರ ವಾಗ್ಮಿ ಹಾಗೂ ವೇದ, ಪುರಾಣ ಉಪನಿಷತ್ತುಗಳ ಪ್ರಕಾಂಡ ಪಾಂಡಿತ್ಯ ಹೊಂದಿರುವ ಕೀರ್ತಿಶೇಷ ಶ್ರೀ ಬನ್ನಂಜೆ ಗೋವಿಂದಾಚಾರ್ಯರ ನೆನೆಪಿಗಾಗಿ "ಬನ್ನಂಜೆ ೯೦" ವಿಶ್ವ ನಮನ ಕಾರ್ಯಕ್ರಮವು ಇತ್ತೀಚೆಗೆ ನ್ಯೂ ಜೆರ್ಸಿಯ ಎಡಿಸನ್ ನಗರದ ಶ್ರೀ ಕೃಷ್ಣ ವೃಂದಾವನದಲ್ಲಿ ಶ್ರೀ ಪುತ್ತಿಗೆ ಮಠಾಧೀಶರ ವಿಡಿಯೋ ಅನುಗ್ರಹ ಸಂದೇಶದ ಮುಖಾಂತರ ಚಾಲನೆಗೊಂಡಿತು.

ಭಾರತದಿಂದ ವಿಶೇಷ ಆಹ್ವಾನಿತರಾಗಿ ಆಗಮಿಸಿದ ಖ್ಯಾತ ಶಿಕ್ಷಣ ತಜ್ಞ, ಚಿಂತಕ ಮತ್ತು ವಾಗ್ಮಿಗಳಾದ ಶ್ರೀ ಗುರುರಾಜ ಕರಜಗಿಯವರು ಬನ್ನಂಜೆಯವರ ವಿಶೇಷ ಜ್ಞಾನ ಮತ್ತು ವಿವೇಕಮಯಿ ವ್ಯಕ್ತಿತ್ವದ ಕುರಿತು ಮಾತನಾಡುತ್ತಾ ಶ್ರೀ ಬನ್ನಂಜೆಯವರು ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತ ಸಿದ್ಧಾಂತಗಳ ಬಗ್ಗೆ ಮುಕ್ತವಾಗಿ ಅಧ್ಯಯನ ನಡೆಸಿ ಮೂರು ದೃಷ್ಟಿಕೋನಗಳ ತುಲನಾತ್ಮಕ ಜಿಜ್ಞಾಸೆ ನಡೆಸಿ ಎಲ್ಲ ಮತಾನುಯಾಯಿಗಳ ಗೌರವಕ್ಕೆ ಮಾನ್ಯರಾದ ಏಕಮಾತ್ರ ವಿದ್ವಾಂಸರೆಂಬ ಹೆಗ್ಗಳಿಕೆ ಗಳಿಸಿರುವ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಬನ್ನಂಜೆಯವರ ಭಗವಂತನ ನಲ್ನುಡಿ ಎಂಬ ಕೃತಿಯಲ್ಲಿ ಭಗವದ್ಗೀತೆಯ ಮೇಲೆ ಈ ಮೂರು ದೃಷ್ಟಿಕೋನದಲ್ಲಿ ಬೆಳಕು ಚೆಲ್ಲಿರುವ ಬಗ್ಗೆ ಪ್ರಸ್ತಾಪಿಸಿದರು.

ಶ್ರೀ ಪುತ್ತಿಗೆ ಮಠದ ಅಂತಾರಾಷ್ಟ್ರೀಯ ಕಾರ್ಯದರ್ಶಿ ಶ್ರೀ ಪ್ರಸನ್ನ ಆಚಾರ್ಯರು ಉಪಸ್ಥಿತರಿದ್ದು ಪೂಜ್ಯ ಬನ್ನಂಜೆಯವರ ಜೊತೆಗಿನ ಅಪೂರ್ವ ಅನುಭವಗಳ ಕಥನವನ್ನು ಬಿಚ್ಚಿಟ್ಟರು. ಶ್ರೀ ಕೃಷ್ಣ ವೃಂದಾವನದ ಪ್ರಧಾನ ಅರ್ಚಕರಾದ ಶ್ರೀ ಯೋಗೀಂದ್ರ ಭಟ್ ಅವರ ಆಶಯ ನುಡಿಯಲ್ಲಿ ಬನ್ನಂಜೆಯವರ ಆಧ್ಯಾತ್ಮಿಕ ಸಾಧನೆಯಿಂದ ಪ್ರೇರಣೆ ಪಡೆದು ಜ್ಞಾನ ಮತ್ತು ಭಕ್ತಿ ಮಾರ್ಗದಲ್ಲಿ ಭಗವಂತನಿಗೆ ಶರಣಾಗಿ ಕರ್ಮಸಾಧನೆಯಲ್ಲಿ ತೊಡಗಬೇಕು ಎಂಬ ಕಿವಿಮಾತನ್ನಿತ್ತರು. ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರಾಗಿ ಬಂದಿದ್ದ, ಪ್ರೊ ಬಿ ಎಮ್ ರಮೇಶ್ ಮತ್ತು ಪ್ರೊ ದೀಪಕ್ ಶರ್ಮಾ ಅವರು ಬನ್ನಂಜೆಯವರು ಬೆಳಕು ಚೆಲ್ಲಿದ ತತ್ತ್ವ ಜ್ಞಾನದ ಕುರಿತು ವಿಶ್ಲೇಷಣೆ ಮಾಡಿದರು.

ಬನ್ನಂಜೆಯವರ ಜೊತೆ ನಿಕಟ ಸಂಪರ್ಕ ಹೊಂದಿದ್ದ ಪ್ರೊ ಪಿ ಆರ್ ಮುಕುಂದ ಮತ್ತು ಡಾ ಸುಧೀಂದ್ರ ಅವರು ತಮ್ಮ ಅಪೂರ್ವ ಮತ್ತು ಸ್ವಾರಸ್ಯಕರ ಅನುಭವಗಳನ್ನು ಹಂಚಿಕೊಂಡರು.

ಬನ್ನಂಜೆಯವರು ರಚಿಸಿದ ಕೆಲವು ವಿಶಿಷ್ಟ ಕೃತಿಗಳನ್ನು ಅವರ ಪುತ್ರಿಯಾದ ವಿದುಷಿ ಕವಿತಾ ಅವರು ಸುಶ್ರಾವ್ಯವಾಗಿ ಪ್ರಸ್ತುತಪಡಿಸಿ ಅಲ್ಲಿ ನೆರೆದಿದ್ದ ೩೦೦ಕ್ಕೂ ಅಧಿಕ ಜಿಜ್ಞಾಸುಗಳನ್ನು ಮುದಗೊಳಿಸಿದರು.

ಭಾರತದ ಹಲವೆಡೆ ಬನ್ನಂಜೆ ೯೦ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನೆರವೇರಿಸಿದ ಬಳಿಕ ಅಮೆರಿಕದ ನಾಲ್ಕು ಕಡೆ ಬನ್ನಂಜೆ ೯೦ ವಿಶ್ವ ನಮನ ಕಾರ್ಯಕ್ರಮ ರೂಪುರೇಷೆಗೊಂಡ ಬಗ್ಗೆ ಬನ್ನಂಜೆ ಪ್ರತಿಷ್ಠಾನದ ನೇತೃತ್ವವಹಿಸಿರುವ ವೀಣಾ ಬನ್ನಂಜೆಯವರು ಮಾತನಾಡಿದರು.

ರಮೇಶ್ ಲಕ್ಷ್ಮೀಶನ್ ಅವರ ನಿರ್ದೇಶನದಲ್ಲಿ ಬನ್ನಂಜೆಯವರು ರಚಿಸಿದ ದ್ವಾದಶ ಸ್ತೋತ್ರದ ಕನ್ನಡ ಅವತರಣಿಕೆಯನ್ನು ಪ್ರಸ್ತುತಪಡಿಸಿದರು. ವಿದುಷಿ ದೀಪ್ತಿ ಗಡ್ ನಿರ್ದೇಶನದಲ್ಲಿ ಪುಟಾಣಿಗಳು ಉಡುಪಿಯ ಕಂಡೀರಾ ಕೃಷ್ಣನ ಕಂಡೀರಾ ಎಂಬ ಗಾಯನ ವೈಶಿಷ್ಟ್ಯಪೂರ್ಣವಾಗಿ ಮೂಡಿಬಂದಿತ್ತು. ಶ್ರೀ ವತ್ಸ ಬಳ್ಳಾಳ್ ಅವರು ಸಂಯೋಜನೆ ಮಾಡಿದ ಕಾರ್ಯಕ್ರಮದಲ್ಲಿ ಜ್ಞಾನದ ಭೋಜನದಿಂದ ಮನಸ್ಸು ತುಂಬಿದರೆ, ಜೊತೆಗೆ ಶ್ರೀ ಕೃಷ್ಣ ವೃಂದಾವನದ ಉಡುಪಿ ಶೈಲಿಯ ವಿಶೇಷ ಭೋಜನ ಪ್ರಸಾದದಿಂದ ಎಲ್ಲರೂ ಸಂತೃಪ್ತಗೊಂಡರು. ಕೊನೆಯಲ್ಲಿ ಶ್ರೀ ಪೂರ್ಣ ಪ್ರಸಾದ್ ಅವರು ವಂದನಾರ್ಪಣೆ ಸಲ್ಲಿಸಿದರು. ನ್ಯೂ ಜೆರ್ಸಿಯ ಶಿವಳ್ಳಿ ಕುಟುಂಬದ ಕಾರ್ಯಕರ್ತರು ಈ ಕಾರ್ಯಕ್ರಮದ ನಿರ್ವಹಣೆಗೆ ಸಂಬಂಧಿಸಿದ ವಿಷಯಗಳಲ್ಲಿ ಆಸಕ್ತಿಯಿಂದ ಸೇವೆ ಸಲ್ಲಿಸಿ ಯಶಸ್ಸಿಗೆ ಕಾರಣೀಭೂತರಾದರು.


॥ आनन्दतीर्थमण्डपम् ॥






SHRI KRISHNA VRUNDAVANA




SHRI KRISHNA VRUNDAVANA



**ಶಾಮಸುಂದರ್ ಹಲ್ಲೇಗೆರೆ**
ನ್ಯೂ ಜೆರ್ಸಿ

# ಶ್ರೀಕೃಷ್ಣ ಬೃಂದಾವನದಲ್ಲಿ ಜರುಗಿದ ವಿಶ್ವೇಶ್ ಭಟ್ ಅವರ ಭಕ್ತಿ ಸಂಗೀತ ಕಾರ್ಯಕ್ರಮ




**ನ್ಯೂ** ಜೆರ್ಸಿಯ ಶ್ರೀಕೃಷ್ಣ ಬೃಂದಾವನವು ಒಂದು ಧಾರ್ಮಿಕ ಕೇಂದ್ರ ಮಾತ್ರವಲ್ಲದೇ ನಮ್ಮ ಕಲೆ ಮತ್ತು ಸಂಸ್ಕೃತಿಯನ್ನು ಭಾರತದಾಚೆ ಅವಿರತ ಪಸರಿಸುವ ಒಂದು ಸುಂದರ ತಾಣವಾಗಿದೆ. ಈ ವೇದಿಕೆ ನಮ್ಮ ಸಾಂಸ್ಕೃತಿಕ ಮೌಲ್ಯಗಳನ್ನು ಭಾರತದ ಗಡಿಯಾಚೆ ಜೀವಂತವಾಗಿರಿಸುವ ಕೈಂಕರ್ಯದಲ್ಲಿ ಅವಿಶ್ರಾಂತವಾಗಿ ಪರಿಶ್ರಮಿಸುತ್ತಾ ಬಂದಿದೆ.

ಈ ನಿಟ್ಟಿನಲ್ಲಿ ಏಪ್ರಿಲ್ ೨೫ ರಂದು ನಮ್ಮ ಕರ್ನಾಟಕದ ಹೆಮ್ಮೆಯ ಗಾಯಕ ಮತ್ತು ರಾಗಗಳ ವಿಶ್ಲೇಷಣೆಯ ವ್ಯಾಖ್ಯಾನಕಾರ ಎಂದೇ ಪ್ರಸಿದ್ಧರಾಗಿರುವ "ಯುಟ್ಯೂಬ್ ಸೆನ್ಸೇಷನ್" ಬೆಂಗಳೂರಿನ ನಿವಾಸಿ ಶ್ರೀಮಾನ್ ವಿಶ್ವೇಶ್ ಭಟ್ ಅವರನ್ನು ಭಕ್ತಿ ಸಂಗೀತದ ಕಾರ್ಯಕ್ರಮ ನೀಡಲು ಆಹ್ವಾನಿಸಲಾಗಿತ್ತು. ಈ ಕಾರ್ಯಕ್ರಮದ ಮೂಲಕ ಶ್ರೀಕೃಷ್ಣ ಬೃಂದಾವನದ ಯಜ್ಞಶಾಲೆಗೆ ನಿಧಿಸಂಗ್ರಹಣೆಯ ಧರ್ಮಕಾರ್ಯವನ್ನೂ ಸಹ ಕಲ್ಪಿಸಲಾಗಿತ್ತು.



ಭಾರತೀಯ ಸಂಗೀತದಲ್ಲಿ ರಾಗಗಳ ಪಾತ್ರ ಮಹತ್ತರ. ರಾಗಗಳ ಸ್ವರ ವಿನ್ಯಾಸ, ನಿಯಮಗಳು ಮತ್ತು ಆರೋಹಣ ಅವರೋಹಣಗಳಲ್ಲಿ ಮೂಡುವ ಭಾವಗಳ ಏರಿಳಿತವನ್ನು ಕೂಲಂಕಷವಾಗಿ ಅಧ್ಯಯಿಸಿರುವ ವಿಶ್ವೇಶ್ ಭಟ್ ಅವರನ್ನು ರಾಗಗಳ ಮಾಂತ್ರಿಕ ಎಂದೇ ಕರೆಯಬಹುದು. ಸಿನಿಮಾ ಸಂಗೀತ, ಜಾನಪದ ಗೀತೆಗಳು, ಭಾವ ಗೀತೆಗಳು ಹಾಗೂ ಭಕ್ತಿಗೀತೆಗಳ ಮೂಲ ರಾಗಗಳನ್ನು ಸುಲಲಿತ ವಿಶ್ಲೇಷಣಗಳ ಪರಿಯಿಂದ ಜನಸಾಮಾನ್ಯರಿಗೆ ತಲಿಪಿಸುವ ನೈಪುಣ್ಯತೆ ವಿಶ್ವೇಶ್ ಅವರದು.

ನಮ್ಮ ಬಾಸ್ಟನ್ ನಗರದ ಖ್ಯಾತ ತಬಲಾ ವಾದಕ ಶ್ರೀಮಾನ್ ರಾಜೇಶ್ ಪೈ, ವಿಶ್ವೇಶ್ ಅವರಿಗೆ ತಬಲಾದಲ್ಲಿ ಸಹಕಾರ ನೀಡುವ ಮೂಲಕ, ತಮ್ಮ ಲಯಜ್ಞಾನದಿಂದ ಕಾರ್ಯಕ್ರಮದ ಮೆರಗು ವರ್ಧಿಸಿದರು. ನಮ್ಮ ನ್ಯೂ ಜೆರ್ಸಿಯ ಯುವ ಪ್ರತಿಭೆ ಚಿರಂಜೀವಿ ಕಶ್ಯಪ್ ರಾವ್ ವಯೊಲಿನ್ ನಲ್ಲಿ ವಿಶ್ವೇಶ್ ಅವರ ಧ್ವನಿಯಲ್ಲಿ ಬೆರೆತು ತನ್ನ ಬೆರಳುಗಳ ಚಾಕಚಕ್ಯತೆಯಿಂದ ಎಲ್ಲರ ಮನಸ್ಸನ್ನು ಸೂರೆಗೊಂಡಿದ್ದು ಶ್ಲಾಘನೀಯ. ಹಾಗೆಯೇ ನಮ್ಮಇನ್ನೋರ್ವ ಯುವ ಪ್ರತಿಭೆ ಚಿರಂಜೀವಿ ಅಭಿಜ್ಞಾ ಭಾರದ್ವಾಜ್ ಕೀಬೋರ್ಡ್ನಲ್ಲಿ ಸಹಕಾರ ನೀಡಿದ್ದು ಹೆಮ್ಮೆಯ ವಿಷಯವಾಗಿದೆ. ಶ್ರೀಮತಿ ಅಮೃತ ಲಕ್ಷ್ಮೀಶನ್ ಕಾರ್ಯಕ್ರಮದ ನಿರೂಪಕಿಯಾಗಿದ್ದು ಕಲಾವಿದರನ್ನು ಪರಿಚಯಿಸಿ ಕಿಕ್ಕಿರಿದ ಸಭಾಂಗಣಕ್ಕೆ ಆಹ್ವಾನಿಸಿದರು.

ಭಾರತೀಯ ಸಂಸ್ಕೃತಿಯಲ್ಲಿ ಯಾವುದೇ ಶುಭ ಸಮಾರಂಭವನ್ನು ಗಣಪತಿಯ ಸ್ತೋತ್ರ ಪಠನೆಯಿಂದ ಆರಂಭಿಸುವುದು ವಾಡಿಕೆ. ಹಂಸಧ್ವನಿ ಗಣಪತಿಗೆ ಪ್ರಿಯವಾದ ರಾಗ. ವಕ್ರತುಂಡ ಮಹಾಕಾಯನನ್ನು ಸ್ಮರಿಸುತ್ತಾ, ಶ್ರೀ ಮಹಾಗಣೇಶ ಪಂಚರತ್ನದ "ಮುದಾಕರಾತ್ತ ಮೋದಕಂ" ಗಣೇಶ ವಂದನೆಯೊಂದಿಗೆ ವಿಶ್ವೇಶ್ ಭಟ್ ಅವರು ಕಾರ್ಯಕ್ರಮವನ್ನು ಪ್ರಾರಂಭಿಸಿ, ರಾಗಗಳ ಹೊಳೆಯಲ್ಲಿ ನೆರೆದಿದ್ದ ಸಭಿಕರನ್ನು ಸುಮಾರು ಎರಡು ಘಂಟೆಗಳ ಕಾಲ ತೇಲಿಸಿದರು. ಹಂಸಧ್ವನಿ, ಶುದ್ಧ ಸಾವೇರಿ, ಖಮಾಚ್, ಬೃಂದಾವನೀ ಸಾರಂಗ, ಮೋಹನ, ಮಧ್ಯಮಾವತಿ, ದರ್ಬಾರಿ ಕಾನಡ, ವಲಚಿ, ಅಭೋಗಿ, ಸಿಂಧು ಭೈರವಿ ರಾಗಗಳ ಸೌಂದರ್ಯವನ್ನು ಸುಂದರ ಗೀತೆಗಳೊಂದಿಗೆ ವರ್ಣಿಸುತ್ತಾ ಒಂದು ಅವಿಸ್ಮರಣೀಯ ಅನುಭವವನ್ನು ಕಲ್ಪಿಸುವುದರಲ್ಲಿ ವಿಶ್ವೇಶ್ ಯಶಸ್ವಿಯಾದರು. ದ್ವಾದಶ ಸ್ತೋತ್ರದ ಅಂತಿಮ ಅಧ್ಯಾಯದ "ಆನಂದ ಮುಕುಂದ ಅರವಿಂದ ನಯನ" ಭಕ್ತಿಗೀತೆಯಂತೂ ನೆರೆದವರಲ್ಲಿ ನವ ಚೈತನ್ಯವನ್ನು ಮೂಡಿಸಿತ್ತು. ನಮ್ಮನ್ನು ದೈನಂದಿನ ಜಂಜಾಟಗಳಿಂದ ಮುಕ್ತಗೊಳಿಸಿ , ಒಂದು ಸಂಗೀತ ಲೋಕಕ್ಕೆ ಕರೆದೊಯ್ದು, ಮಂತ್ರ ಮುಗ್ಧರಾಗಿಸಿ, ಪ್ರೇಕ್ಷಕರ ಮನದಾಳಗಳನ್ನು ವಿಶ್ವೇಶ್ ಸೂರೆಗೊಂಡರು ಅನ್ನುವುದರಲ್ಲಿ ಯಾವ ಸಂದೇಹವಿಲ್ಲ.





ಕಲೆಗೆ ನಮ್ಮನ್ನು ಪರಿವರ್ತಿಸುವ ವಿಶೇಷ ಶಕ್ತಿ ಇದೆ ಎನ್ನುವುದು ಅತಿಶಯೋಕ್ತಿ ಅಲ್ಲ. ವಿಶ್ವೇಶ್ ಅವರು ಹಾಡಿದ ಪಿಳ್ಳಂಗೋವಿಯ ಚೆಲ್ವ ಕೃಷ್ಣ, ಆಡಪೋಗೋಣ ಬಾರೋ ರಂಗ, ತುಂಗಾ ತೀರದಿ ನಿಂತ ಯತಿವರ, ಮಧ್ವಾಚಾರ್ಯರ ದ್ವಾದಶ ಸ್ತೋತ್ರ, ಶ್ರೀ ಶ್ರೀನಿವಾಸ ಶ್ರೀ ವೆಂಕಟೇಶ ಮತ್ತು ಇನ್ನೂ ಹಲವಾರು ಭಕ್ತಿ ಗೀತೆಗಳು ಕಾರ್ಯಕ್ರಮ ಮುಗಿದ ನಂತರವೂ ನನ್ನ ಮನಸ್ಸಿನಲ್ಲಿ ಗುನುಗುತ್ತಿದ್ದವು. ತಮ್ಮ ಭಕ್ತಿಗೀತೆಗಳ ಮೂಲಕ ನಮ್ಮನ್ನು ಹದಿಮೂರು ತೀರ್ಥಕ್ಷೇತ್ರಗಳಿಗೆ ಕರೆದೊಯ್ದ ವಿಶ್ವೇಶ್ ಭಟ್ ಇಡೀ ಸಭಾಂಗಣವನ್ನು ಭಕ್ತಿಯ ಲಹರಿಯಲ್ಲಿ ಮುಳುಗಿಸಿದರು. ದಾಸರ ಪದಗಳನ್ನು ಮತ್ತು ವಚನಗಳನ್ನು ಸರಳವಾಗಿ ಅರ್ಥೈಸಿಸುತ್ತಾ, ಒಂದು ದೈವೀಕ ಹಾಗೂ ಆಧ್ಯಾತ್ಮಿಕ ಲೋಕವನ್ನು ಕಲ್ಪಿಸಿ, ಸಭಿಕರನ್ನು ಭಗವಂತನ ಸ್ಮರಣೆಯಲ್ಲಿ ತೊಡಗಿಸಿದರು.



ಶಾಸ್ತ್ರೀಯ ಸಂಗೀತ ಗಾಯಕನ ರಾಗಜ್ಞಾನವು ಬರೀ ತಾಂತ್ರಿಕ ಕುಶಲತೆಯಲ್ಲ, ಅದು ಸಂಗೀತದ ಮೇಲಿನ ಭಕ್ತಿ, ಅಭ್ಯಾಸ ಮತ್ತು ಅನುಭವದ ಪ್ರತೀಕವಾಗಿದೆ. ಅದನ್ನು ಸರ್ವತ್ರ ತಲುಪಿಸುವ ವಿಶ್ವೇಶ್ ಅವರ ಧ್ಯೇಯ ಪ್ರಶಂಸನೀಯ. ಕಾರ್ಯಕ್ರಮ ಮುಗಿದ ನಂತರದ ಕಿಕ್ಕಿರಿದ ಜನರ ಅನಂತ ಕರತಾಡನ ಅವರ ವಿಶೇಷ ಪ್ರತಿಭೆಗೆ ಸಲ್ಲಿಸುವ ಗೌರವದ ಸಂಕೇತವಾಗಿತ್ತು. ಇಂತಹ ಜ್ಞಾನವರ್ಧಕ ಕಾರ್ಯಕ್ರಮಗಳು ನಮ್ಮ ಸಂಸ್ಕೃತಿಯನ್ನು ಪರಿಚಯಿಸುವಲ್ಲದೆ ನಮ್ಮ ದೃಷ್ಟಿಕೋನವನ್ನೂ ಬದಲಾಯಿಸುತ್ತವೆ.

ಕೊನೆಯದಾಗಿ , ನಮ್ಮ ಸಂಸ್ಕೃತಿ ಮತ್ತು ಮಾನವೀಯ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುವ ಕಾರ್ಯದಲ್ಲಿ ಅವಿರತ ತನ್ನನ್ನು ತೊಡಗಿಸಿರುವ ಶ್ರೀಕೃಷ್ಣ ಬೃಂದಾವನ ಸಂಸ್ಥೆಯ ಸೇವೆ ಅನನ್ಯವಾದದ್ದು. ಶ್ರೀಕೃಷ್ಣ ಮಠದ ಈ ಸಾಂಸ್ಕೃತಿಕ ಕೈಂಕರ್ಯವು ಹೀಗೆಯೇ ಮುಂದುವರಿಯಲಿ ಎಂದು ಆಶಿಸುತ್ತಾ, ವಿಶ್ವೇಶ್ ಭಟ್ ಹಾಗೂ ತಂಡದವರಿಗೆ ಮತ್ತು ಈ ಕಾರ್ಯಕ್ರಮದ ಯಶಸ್ಸಿಗೆ ಕಾರಣೀಭೂತರಾದ ಎಲ್ಲರಿಗೂ ನಾವು ಆಭಾರಿಯಾಗಿದ್ದೇವೆ. ನನ್ನ ಜೀವನದ ಒಂದು ಅವಿಸ್ಮರಣೀಯ ಕಾರ್ಯಕ್ರಮ ಇದಾಗಿದೆ.



**ಶ್ರೀವಿದ್ಯಾ ಪ್ರಶಾಂತ್**
ನ್ಯೂ ಜೆರ್ಸಿ

# ಮೋಜು - ಮಸ್ತಿಯ
# ಬೃಂದಾವನ ವಾರ್ಷಿಕ ವನವಿಹಾರ

**ಬೇ**ಸಿಗೆ ಬಂತೆಂದರೆ ಸಾಕು ಪ್ರಕೃತಿಯ ತುಂಬೆಲ್ಲಾ ಚೈತನ್ಯದ ಹೊಸ ಹೊಳಪು ಮಿನುಗುತ್ತಿರುವುದು. ಅಂತೆಯೇ ಈ ಬಾರಿ ನಮ್ಮ ಬೃಂದಾವನ ಕನ್ನಡ ಕೂಟದ "ಸಂಕಲ್ಪ" ತಂಡವು ಆಯೋಜಿಸಿದ್ದಂತಹ ವಾರ್ಷಿಕ ವನವಿಹಾರ, ಎಲ್ಲರಲ್ಲೂ ಉತ್ಸಾಹ ಮತ್ತು ಉಲ್ಲಾಸವನ್ನು ತುಂಬಿ, ಸಂತೋಷದಿಂದ ಯಾವುದೇ ವಯೋಮಾನದ ಮಿತಿ ಇಲ್ಲದೆ ಭಾಗಿಯಾಗುವಂತೆ ಪ್ರೇರೇಪಿಸಿತ್ತು.

ದಿನವಿಡೀ ಆಟ - ಊಟ - ಮೋಜು -ಮಸ್ತಿಯೊಂದಿಗೆ ಜೊತೆಯಾಗಿ ಕಳೆದ ಸಮಯ ಅವಿಸ್ಮರಣೀಯ ಎಂದರೆ ತಪ್ಪಾಗಲಾರದು. ಈ ದಿನದ ಎಲ್ಲಾ ಚಟುವಟಿಕೆಗಳನ್ನು ಬಹಳ ವ್ಯವಸ್ಥಿತಪೂರ್ಣವಾಗಿ ಮತ್ತು ಸಮರ್ಪಕವಾಗಿ ಕಾರ್ಯರೂಪಗೊಳಿಸಿದ "ಸಂಕಲ್ಪ ತಂಡ"ದ ಪದಾಧಿಕಾರಿಗಳ ಮತ್ತು ಸ್ವಯಂ ಸೇವಕರ ಪರಿಶ್ರಮ ನಿಜಕ್ಕೂ ಶ್ಲಾಘನೀಯ.











# ವನವಿಹಾರ




















**ಯಶಸ್ವಿನಿ**
ನ್ಯೂ ಜೆರ್ಸಿ

# ಕಡಲ ತೀರದ ಮಧುರ ಕ್ಷಣಗಳು



**ಬೆ**ಸಿಗೆಯ ಸಮಯವು ಬಂದಿದೆ .ಸುಮಾರು ಏಳೆಂಟು ತಿಂಗಳಿನ ಸುದೀರ್ಘ ಚಳಿಗಾಲದಿಂದ ಕೊಂಚ ಬೇಸರಗೊಂಡಿದ್ದ ನಮ್ಮೆಲ್ಲರ ಮನಸ್ಸಿಗೆ ವಸಂತಋತು (Spring)ಹಾಗೂ ಬೇಸಿಗೆ (summer)ನವಚೈತನ್ಯವನ್ನು ತಂದಿದೆ ಎಂದರೆ ತಪ್ಪಾಗಲಾರದು .
ಬೇಸಿಗೆಯ ಪ್ರಮುಖ ಆಕರ್ಷಣೆಯೆಂದರೆ ಕಡಲು(ಬೀಚ್).ಹೌದು, ಎಲ್ಲ ವಯೋಮಾನದವರಿಗೂ ಬೀಚ್ ಎಂದರೆ ಅಚ್ಚುಮೆಚ್ಚು. ನಮ್ಮ ನ್ಯೂಜರ್ಸಿಯಲ್ಲಿ ಅನೇಕ ಉತ್ತಮ ಹಾಗೂ ಸ್ವಚ್ಛವಾದ ಬೀಚ್ ಗಳಿವೆ.
ಸಂಜೆಯ ಸಮಯದಲ್ಲಿ ಕಡಲ ತೀರಕ್ಕೆ ಹೋದರೆ ಮನಸ್ಸಿಗೆ ಒಂದು ರೀತಿ ವಿಶೇಷವಾದ ಶಾಂತಿಯು ಸಿಗುತ್ತದೆ. ಅಲೆಗಳು ನಿಧಾನವಾಗಿ ಕರಾವಳಿಯನ್ನು ತಟ್ಟುವ ಶಬ್ದ, ಸೂರ್ಯಾಸ್ತದ ಬಣ್ಣ ಹಾಗೂ ತಂಪಾದ ಗಾಳಿ ಪ್ರಕೃತಿಯ ಅದ್ಭುತ ಸೌಂದರ್ಯವನ್ನು ತೋರಿಸುತ್ತದೆ. ಅಲೆಗಳಿಂದ ನಾವು ಕಲಿಯಬಹುದಾದ ಜೀವನ ಪಾಠಗಳು ಸಾಕಷ್ಟಿವೆ. ಸಮುದ್ರ ನಮಗೆ ಸಹನೆಯನ್ನು, ನಿರಂತರ ಪ್ರಯತ್ನವನ್ನು ಕಲಿಸುತ್ತದೆ. ಅಲೆಗಳು ಎಷ್ಟು ಬಾರಿ ಹಿಂದಕ್ಕೆ ಹೋದರೂ ಮತ್ತೆ ಮುನ್ನಡೆಯುತ್ತವೆ. ಜೀವನದಲ್ಲಿಯೂ ಹಾಗೆಯೇ ನಾವು ನಿರಾಶರಾಗದೆ ಮುಂದುವರಿಯಬೇಕು .
ಕಡಲ ತೀರಕ್ಕೆ ಕೆಲವರು ವಿನೋದಕ್ಕಾಗಿ ಹೋಗುತ್ತಾರೆ, ಇನ್ನೂ ಕೆಲವರು ತಮ್ಮ ಒಂಟಿತನವನ್ನು ಮರೆಯಲು, ಮತ್ತೆ ಕೆಲವರು ತಮ್ಮ ಸಮಸ್ಯೆಗಳಿಗೆ ತಾತ್ಕಾಲಿಕವಾಗಿಯಾದರೂ ವಿರಾಮ ಹಾಕಬೇಕೆಂದು ಹೋಗುತ್ತಾರೆ.
ನನಗೆ ವೈಯುಕ್ತಿಕವಾಗಿ ಮಧ್ಯಾಹ್ನದ ಸಮಯ ಬೀಚ್ ಗೆ ಹೋಗಲು ಇಷ್ಟವಾಗುವುದಿಲ್ಲ, ಕಾರಣ ಬಿಸಿಲಿನ ಧಗೆ. ಬೆಳಗಿನ ಸಮಯ ಅಥವಾ ಸಂಜೆಯ ಸಮಯ ಕಡಲಿಗೆ ಭೇಟಿ ಕೊಡಲು ಉತ್ತಮ ಸಮಯವಾಗಿದೆ.
ಬೆಳಗಿನ ಸಮಯ ಕಡಲ ತೀರ ಬಹಳ ಪ್ರಶಾಂತವಾಗಿರುತ್ತದೆ. ಸೂರ್ಯನ ಕಿರಣಗಳು ನೀರಿನ ಮೇಲೆ ಬೀಳುವ ದೃಶ್ಯವನ್ನು ನೋಡುವಾಗ ಆಗುವ ಆನಂದವನ್ನು ವರ್ಣಿಸಲು ಸಾಧ್ಯವಿಲ್ಲ. ಇನ್ನು ಮಕ್ಕಳಿಗಂತೂ ಕಡಲ ತೀರವೆಂದರೆ ಹೇಳಲಾರದಷ್ಟು ಆನಂದ. ಅವರು ಮರಳಿನಲ್ಲಿ ಆಟವಾಡುತ್ತ, ಮರಳು ಕೋಟೆಯನ್ನು ಕಟ್ಟುತ್ತಾ(Sand castle )ಸಂಭ್ರಮಿಸುತ್ತಾರೆ. ಕೆಲ ಮಕ್ಕಳು ಚೆಂಡಾಟ ಅಡಿದರೆ ಇನ್ನು ಕೆಲವರು ಗಾಳಿಪಟ ಹಾರಿಸುತ್ತಾರೆ, ಶಂಖಗಳನ್ನು ಸಂಗ್ರಹಿಸುತ್ತಾರೆ, ಮತ್ತೆ ಕೆಲವರು ಬೀಚ್ ವಾಲಿಬಾಲ್ ಹೀಗೆ. ಕುಟುಂಬದವರು ಸಹ ಅವರೊಂದಿಗೆ ಸೇರಿ ಸುಂದರ ಕ್ಷಣಗಳನ್ನು ಕಳೆಯುತ್ತಾರೆ.
ಕಡಲ ತೀರದಲ್ಲಿ ಕುಳಿತು ದೂರದ ಅಲೆಗಳನ್ನು ವೀಕ್ಷಿಸುವುದೇ ಒಂದು ವಿಶಿಷ್ಟವಾದ ಅನುಭವ. ನಮ್ಮ ಜೀವನವೂ ಸಹ ಸಮುದ್ರದಂತೆಯೇ ಎಂಬ ಭಾವನೆ ಬರುತ್ತದೆ. ಕೆಲವೊಮ್ಮೆ ಶಾಂತ, ಕೆಲವೊಮ್ಮೆ ಪ್ರಬಲ ಆದರೆ ಮುಂದೆ ಸಾಗುತ್ತ ಹೋಗುತ್ತಿರುತ್ತದೆ.
ಬೀಚ್ ಗಳು ಪ್ರವಾಸೋದ್ಯಮಕ್ಕೂ ಬಹಳ ಮುಖ್ಯ. ಅನೇಕ ದೇಶಗಳಲ್ಲಿ ಬೀಚ್ ಪ್ರಸಿದ್ಧ ಪ್ರವಾಸಿ ತಾಣಗಳಾಗಿರುತ್ತವೆ. ದೇಶದ ಆರ್ಥಿಕತೆಯಲ್ಲಿ ಸಹ ಪ್ರಮುಖ ಪಾತ್ರ ವಹಿಸುತ್ತವೆ. ಸಮುದ್ರದಲ್ಲಿ ವಿವಿಧ ರೀತಿಯ ಸಮುದ್ರಜೀವಿಗಳು ಕಾಣಸಿಗುವುದರಿಂದ ಅಧ್ಯಯನಕ್ಕೂ ಸಹ ಸಹಕಾರಿಯಾಗಿದೆ.
ಕಡಲ ತೀರವೆಂದರೆ ಭಾವನೆಗಳು ಮತ್ತು ನೆನಪುಗಳ ಒಂದು ಸುಂದರ ಲೋಕ. ಇದು ಪ್ರಕೃತಿಯು ನಮಗೆ ನೀಡಿರುವ ಸುಂದರವಾದ ಉಡುಗೊರೆ, ಹಾಗಾಗಿ ಎಲ್ಲೆಂದರಲ್ಲಿ ಪ್ಲಾಸ್ಟಿಕ್ ಕವರ್ ಹಾಗೂ ಕಸವನ್ನು ಎಸೆಯಬಾರದು. ಸಮುದ್ರವನ್ನು ಸುರಕ್ಷಿತವಾಗಿಡುವುದು ಹಾಗೂ ಸ್ವಚ್ಛತೆಯನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.



**ಸೌಮ್ಯ ರವಿ,**
ದಾವಣಗೆರೆ

# ನ್ಯೂ ಜೆರ್ಸಿ ಜೀವನ

**ವ**ರ್ಷಕ್ಕೆ ಮಾಸಗಳು ಹನ್ನೆರಡು, ಆದರೆ ಕಾಲಗಳು ಮೂರು ಬೇಸಿಗೆ ಕಾಲ, ಮಳೆಗಾಲ ಮತ್ತು ಚಳಿಗಾಲ. ಪ್ರತಿ ಕಾಲಕ್ಕೆ ನಾಲ್ಕು ತಿಂಗಳಂತೆ, ಆದರೆ ನ್ಯೂಜೆರ್ಸಿಯಲ್ಲಿ ಮಾತ್ರ ಪ್ರತಿಯೊಂದು ಪ್ರಕೃತಿಯ ಬದಲಾವಣೆಗೆ ಒಂದೊಂದು ಕಾಲ.

ಬೇಸಿಗೆ ಕಾಲ ಮೂರು ತಿಂಗಳು ಹೊರಗೆ ಹೋಗಬೇಕಂದರೆ ಬಿಸಿಲಿನ ಭಯ, ಒರೆಸಿಕೊಂಡು ಒದ್ದೆಯಾದರು ಕರವಸ್ತ್ರ ನಿಲ್ಲದ ಬೆವರು, ಗಾಳಿಗಾಗಿ ಹುಡುಕಿದರು ಒಂದು ಎಲೆಯನ್ನು ಅಲುಗಾಡಿಸದ ನಿಂತ ಮರಗಳು, ಕೊನೆಗೆ ಗಾಳಿಗಾಗಿ ತಿರುಗಿ ಮನೆಗೆ ಬರಬೇಕು. ಮನೆಯಲ್ಲಿ ನಿಲ್ಲದೆ ತಿರುಗುವ ಎ.ಸಿ, ಫ್ಯಾನು. ಶೆಕೆಯ ಬೇಗೆ ತಡೆಯಲಗದೆ ನಾವೇ ದೇವರ ಬಳಿ ಮಳೆಯ ಮೊರೆ ಹೋಗಬೇಕು.



ಚಿತ್ರ ಕೃಪೆ : ಅಂತರ್ಜಾಲ

ಹಿಂದೆಯೇ ಬರುವದು ಮಳೆಗಾಲ. ಆಹಾ ಮಳೆ ಬಂತು ಭೂಮಿ ತಣ್ಣಗಾಯ್ತು, ನಮ್ಮ ಜೀವವೂ ತಣ್ಣಗಾಯ್ತು ಎನ್ನುವಷ್ಟರಲ್ಲಿ ಮಳೆ ನಿಂತಿತು. ಶೆಕೆಯ ಬೇಗೆ ಇನ್ನೂ ಹೆಚ್ಚಾಯ್ತು, ದೇವರಿಗೆ ಬೈಗುಳದ ಸುರಿಮಳೆ, ಸಿಟ್ಟಿಗೆದ್ದ ವರುಣನ ಆಕ್ರಮಣ, ಮನೆಯಿಂದ ಹೊರಗೆ ಹೆಜ್ಜೆ ಇಡಲೂ ಯೋಚಿಸಬೇಕಾದ ಪರಿಸ್ಥಿತಿ. ಹೇಗೋ ಹೀಗೋ ಎರಡು ತಿಂಗಳು ಮುಗಿಯುವಷ್ಟರಲ್ಲಿ ಬರುವುದು ಚಳಿಗಾಲ.

ಇಲ್ಲಿಂದ ಹೆಚ್ಚುವ ಕಾಲಗಳು, ಮೊದಲು ಎಲೆ ಉದುರುವ ಕಾಲ. ಪ್ರಕೃತಿಯಲ್ಲಾಗುವ ಬದಲಾವಣೆಯನ್ನು ನಾವು ಅನುಭವಿಸಬಹುದು. ಮರಗಳಲ್ಲಿನ ಎಲ್ಲಾ ಎಲೆಗಳ ಬಣ್ಣ ಬದಲಾಗುತ್ತವೆ. ಕೆಲವು ಹಸಿರು ಇದ್ದರೆ ಇನ್ನು ಕೆಲವು ಹಳದಿ ಮತ್ತೇ ಕೆಲವು ಕೆಂಪಾದರೆ ಉಳಿದವು ಕಂದಾಗಿರುತ್ತವೆ. ಹಾಗೆಯೆ ಇದನ್ನು ನೋಡುವ ಅನುಭವಿಸುವ ಭಾಗ್ಯ ನಮಗೆ ದೊರೆತಿದೆ.

ಇದನೆಲ್ಲಾ ಕಣ್ತುಂಬಿಕೊಳ್ಳುವಷ್ಟರಲ್ಲಿ ಮರಗಳಲ್ಲಿರುವ ಎಲ್ಲಾ ಎಲೆಗಳು ಉದುರಿ ಬೋಳುಬೋಳಾಗುತ್ತವೆ. ನೋಡ ನೋಡುತ್ತಲೇ ಬೀಳುತ್ತದೆ ಹಿಮ. ಅಂದರೆ ಈಗ ಆರಂಭವಾಯಿತು ಹಿಮ ಬೀಳುವ ಕಾಲ. ಈ ಕಾಲದಲ್ಲಿ ನಾವು ಎಂದು ತೊಡದೆ ಇರುವಂತಹ ಉಡುಗೆಗಳನ್ನು ತೊಡಬೇಕು. ಅಂದರೆ ಉಡುಗೆ ಮೇಲೊಂದು ಉಡುಗೆ, ಅದರ ಮೇಲೊಂದು ಕೋಟು, ತಲೆ ಮೇಲೆ ಹ್ಯಾಟು, ಕಾಲಿಗೆ ಬೂಟು, ಕೈಗೆ ಗ್ಲೌಸು ಹೀಗೆ. ಇದೆಲ್ಲವನ್ನು ತೊಟ್ಟು ಹೊರಡುವಷ್ಟರಲ್ಲಿ ಹೊರಗೆ ಹೋಗಬೇಕೆನ್ನುವ ಮನಸ್ಥಿತಿಯೇ ಇರುವುದಿಲ್ಲ. ಆದರೆ ಏನು ಮಾಡುವುದು ಇದು ಒಂದು ದಿನದ ಮಾತಲ್ಲ, ಇದು ಉಳಿವುದು ೩-೪ ತಿಂಗಳು, ಮತ್ತು ಇದುವೇ ಅತ್ಯಂತ ಉದ್ದನೆಯ ಕಾಲ.

ಈ ಕಾಲ ಯಾವಾಗ ಮುಗಿಯುವುದೋ ಎಂದು ಕಾಯುತ್ತಿರುವಾಗ ಬರುವುದು ಅತ್ಯಂತ ಸುಂದರವಾದ ಕಾಲ ಅದುವೇ ಚಿಗುರು ಕಾಲ. ೪-೫ ತಿಂಗಳು ಬರಡಾಗಿರುವ ಮರಗಳಲ್ಲಿ ಸಣ್ಣ ಚಿಗುರು,ಹಾಗೆಯೇ ಸುಂದರವಾದ ಹೂಗಳ ಜನನ. ಈ ಬದಲಾವಣೆಯನ್ನು ನೋಡುವುದು, ಅನುಭವಿಸುವುದು ಮತ್ತು ಪ್ರತ್ಯಕ್ಷಿಸುವುದು ಒಂದು ಪುಣ್ಯ. ಈಗ ಇಡೀ ನ್ಯೂ ಜೆರ್ಸಿಯೇ ಹಚ್ಚ ಹಸಿರಾಗಿ, ಸುಂದರವಾಗಿ, ಕಿಲಕಿಲ ನಗುತ ನಲಿಯುವ ಮಗುವಿನಂತೆ ಕಾಣುತ್ತದೆ.

ಹೀಗೇ ನಾವು ಹೊಸ ಜೆರ್ಸಿ ಯಲ್ಲಿರುವವರು ಪ್ರತಿ 2 ತಿಂಗಳಿಗೊಮ್ಮೆ ಪ್ರಕೃತಿಯಲ್ಲಾಗುವ ಬದಲಾವಣೆಗಳ ಜೊತೆಗೆ ೩ ಕಾಲಗಳನ್ನು ೬ ಕಾಲಗಳಾಗಿ ಅನುಭವಿಸುತ್ತೇವೆ.

# ಕಥಾ ಸಂಕಲನ





**ಆನುವಾದ: ರಾಗಿಣಿ ದರ್ಶನ್**
ನ್ಯೂ ಜೆರ್ಸಿ

# ಚಿಪ್ಪಿ

ಹಿನ್ನೆಲೆ

**ಪ್ರ**ತಿ ವರ್ಷ ನನ್ನ ಪ್ರೈಮರೀ ಡಾಕ್ಟರ್ ಕೋಲೊನೋಸ್ಕಪಿ ಮಾಡಿಸುತ್ತಾರೆ, ಎಂದಿನಂತೆ ಈ ಸಾರಿ ಪರೀಕ್ಷೆ ಮಾಡಿಸುವುದಕ್ಕೆ ಹೋಗಿದ್ದಾಗ, ಆನೆಸ್ತೆಶಿಯವನ್ನು ಸ್ವಲ್ಪ ಹೆಚ್ಚಾಗಿ ಆಕಸ್ಮಿಕವಾಗಿ ಕೋಟಿದ್ದರು, ಅದರ ಪರಿಣಾಮ ನನ್ನ ಹೃದಯ ಕೆಲವು ನಿಮಿಷಗಳು ಬಡಿಯುವುದು ನಿಂತು, ಪರಲೋಕಕ್ಕೆ ಹೋಗಬೇಕಾಯ್ತು. ಆ ಲೋಕ ಎಷ್ಟು ಸುಂದರವಾಗಿತ್ತು ಅಂದರೆ, ಬಿಟ್ಟು ಬರವುದಕ್ಕೆ ಮನಸ್ಸು ಬರುತ್ತಿರಲಿಲ್ಲ.

ಕಥೆ ಬರೆಯುವುದು ನನಗೆ ಒಂದು ಥರ ಅಬ್ಯಾಸ. ಈ ಕಥೆ ನನ್ನ ಸ್ವಲ್ಪ ಕಲ್ಪನೆ ಹಾಗೂ ಸತ್ಯ ಘಟನೆಗಳ ಆದಾರ. ನನಗೆ ಚಿಕ್ಕಂದಿನಿಂದ ಶ್ವಾಶಕೋಶದ ತೊಂದರೆ ಇತ್ತು, ಸ್ವಲ್ಪ ದಿನಗಳಿಂದ ನ್ಯೂಮೊನಿಯದಿಂದ ನರಳುತ್ತಿದ್ದೆ.

ನನ್ನ ಅನಿಸಿಕೆಗಳನ್ನು ಬೇರೆಯವರ ಜೊತೆ ಹಂಚಿ ಕೊಳ್ಳಬೇಕು ಅನಿಸಿದಾಗಲೆಲ್ಲಾ ಪುಸ್ತಕದಲ್ಲಿ ಬರೆದು ತೃಪ್ತಿ ಪಡುತ್ತಿದ್ದೆ. ಈ ಕಥೆಗೆ ಪ್ರೇರಣೆ ಬಂದಿದ್ದು, ನ್ಯೂಮೊನಿಯದಿಂದ ಚೇತರಿಸಿ ಕೊಳ್ಳುವ ಸಮಯದಲ್ಲಿ.

ಯಾರೇ ಆಗಲಿ ಸಾವಿನ ದವಡೆಯಿಂದ ತಪ್ಪಿಸಿಕೊಂಡು ಮತ್ತೆ ವಾಸ್ತವತೆಗೆ ಬಂದಾಗ ಅದು ಒಂದು ಅಚ್ಚರಿಯ ಸಂಗತಿ. ಈ ವಾಸ್ತವ ಪ್ರಪಂಚದಿಂದ ಆಚೆ ಬೇರೆ ಪ್ರಪಂಚ ಇದೆಯೇ ಅನ್ನುವ ಪ್ರಶ್ನೆ ನನ್ನ, ಯಾವಾಗಲೂ ಕಾಡುತಿತ್ತು. ದೇವಲೋಕ, ಸ್ವರ್ಗ, ನರಕ, ಗಂಧರ್ವ ಕನ್ಯೆಯರು ನಿಜವಾಗಲೂ ಇದ್ದಾರೆಯೇ, ನನ್ನ ಸತ್ತು ಸ್ವರ್ಗ ಸೇರಿರುವ ಹಿರಿಯರು ಆ ಪ್ರಪಂಚದಲ್ಲಿ ಈಗ ಸುಖವಾಗಿ ಇರಬಹುದೇ? ಹೀಗೆ ಹಲವಾರು ಯೋಚನೆಗಳು ಕಾಡುತ್ತಲೇ ಇತ್ತು. ಸತ್ತು ಹುಟ್ಟುವುದು ಎಲ್ಲರ ಬಯಕೆ, ಆದರೆ ಹೇಗೆ ಹುಟ್ಟಿ ಬರುವುದು ಎಂಬುದು ಒಂದು ಯಕ್ಷ ಪ್ರಶ್ನೆ .

ನನ್ನ ಗುರು ಮತ್ತು ಮಾರ್ಗದರ್ಶಕ ಕೇವಲ ಒಂದು ಅಳಿಲು ಎಂದರೆ ನಿಮಗೆಲ್ಲ ಆಶ್ಚರ್ಯ ಆಗಬಹುದು . ಸಾವು ಒಂದು ರೀತಿ ಯಾರಿಗೂ ಬಿಡಿಸಲಾರದ ಸವಾಲು, ಒಂದು ಅಚ್ಚರಿ, ಒಂದು ಊಹೆ, ಅಥವಾ ಒಂದು ಸುಂದರವಾದ, ವರ್ಣಿಸುವುದಕ್ಕೆ ಆಗದ ಆನುಭವ. ಎಲ್ಲವನ್ನು ನಾವು ಹೇಗೆ ನೋಡುತೀವಿ ಅನ್ನುವುದರಲ್ಲಿ ಇರುತ್ತೆ.

*****

ಅನಸ್ತೇಶಿಯ ಹೆಚ್ಚಾಗಿ ನನ್ನ ಹೃದಯ ನಿಂತಾಗ, ನನಗೆ ಜ್ಞಾಪಕ ಇದ್ದಹಾಗೆ ಒಂದು ಕತ್ತಲೆಯ ಕೋಣೆ, ಒಂಥರ ಕೆಂಪುಮಿಶ್ರಿತ ಕಪ್ಪು ಬಣ್ಣ, ಒಂದು ವಿಚಿತ್ರವಾದ ಸುಖದ ಸುಪತ್ತಿಗೆಯಲ್ಲಿ ಮಲಗಿರುವ ಅನುಭವ. ನನ್ನ ಮನೆಯ ಮುಂದಿನ ಪಡಸಾಲೆಯಲ್ಲಿ ಕುಳಿತ್ತಿದ್ದೇನೆ, ಯಾರು ಮನೆಗೆ ಕರೆತಂದರು?, ಹೆಂಡತಿ ಮಕ್ಕಳು ಇಲ್ಲದವನು ನಾನು. ಆದರೆ ಆಸ್ಪತ್ರೆ ಯಾವಾಗ ಬಿಟ್ಟೆ ಅನ್ನುವುದು ಜ್ಞಾಪಕ ಬರುತ್ತ ಇಲ್ಲ, ಆಶ್ಚರ್ಯ ಅಂದರೆ ಆದರ ಬಗ್ಗೆ ತಲೆ ಏನು ನಾನು ಕೆಡಿಸಿಕೊಳ್ಳಲಿಲ್ಲ, ಅದು ನನ್ನ ಸ್ವಭಾವಕ್ಕೆ ವಿರುದ್ದವಾದ ಸಂಗತಿ ಅಂದರೆ ತಪ್ಪಾಗಲಾರದು. ಒಬ್ಬಂಟಿಗ ನಾದ ನಾನು, ಎಲ್ಲವನ್ನೂ ಕೊಲಂಕುಶವಾಗಿ ವಿಚಾರಿಸುವವನು, ಸಾಮಾನ್ಯವಾಗಿ ಎಲ್ಲಾದಕ್ಕೂ ತಲೆ ಕೆಡಸಿಕೊಳ್ಳುವ ಸ್ವಭಾವದವನು ನಾನು, ಈಗ ಆಸ್ಪತ್ರೆಯಿಂದ ಮನೆಗೆ ಹೇಗೆ ಬಂದೇ ಎಂಬ ಯೋಚನೆ ಬರಲೇಯಿಲ್ಲ. ಅದು ನನ್ನ ಸ್ವಭಾವಕ್ಕೆ ವಿರುದ್ದ.

ಕಣ್ಣು ಮುಂದೆ ಚಿಪ್ಪಿ ಅಂತ ಹೆಸರು ಹೇಳಿಕೊಂಡು ಒಂದು ಅಳಿಲು ಕುಳಿತಿದೆ. ಈ ಮಾತನಾಡುವ ಅಳಿಲು ಹೇಗೆ ನನ್ನ ಮುಂದೆ ಪ್ರತ್ಯಕ್ಷವಾಯಿತು? ಇದು ರಾಮನ ಯುಗದ ಅಳಿಲೆ?

ಚಿಕ್ಕ ಕಂದು ಬಣ್ಣದ ಅಳಿಲು ನನ್ನ ಮುಂದೆ ಮೇಜಿನ ಮೇಲೆ ಕುಳಿತು ನನ್ನನ್ನೇ ಕುತೂಹಲದಿಂದ ನೋಡುತಿತ್ತು.

“ಹೇಗಿದ್ದೀಯ ಪುಟ್ಟ ಅಳಿಲೆ” ನಗುತ್ತಾ ಕೇಳಿದೆ. ಅದಕ್ಕೆ ಉತ್ತರವಾಗಿ “ ಮಿಸ್ಟರ್ ಗ್ಯಾರಿ, ನಾನು ಚಿಪ್ಪಿ , ನಿಮ್ಮನ್ನು ನೋಡಿ ಸಂತೋಷ ಆಯಿತು “ ಅಂತ ಹೇಳಿತು . ನಾನು ಕಣ್ಣು ಮೀಟುಕಿಸುವುದನ್ನು ಮರೆತು ಅದನ್ನೇ ಸ್ವಲ್ಪ ಹೊತ್ತು ನೋಡುತ್ತ ಕುಳಿತೆ, ಒಂದು ಕಡೆ ಆಶ್ಚರ್ಯ, ಇನ್ನೊಂದು ಕಡೆ ಅನುಮಾನ, ಮಾತನಾಡುವ ಈ ಅಳಿಲು ಎಲ್ಲಿಂದ ಬಂತು? ನನ್ನ ಹೆಸರು ಹೇಗೆ ಇದಕ್ಕೆ ಗೊತ್ತಾಯಿತು, ಹೀಗೆ ಹಲವಾರು ಪ್ರಶ್ನೆಗಳು ಒಟ್ಟಿಗೆ ಮನಸ್ಸಿಗೆ ಬಂತು.ಆದರೂ ಅಚ್ಚರಿಯನ್ನು ಬದಿಗಿಟ್ಟು “ ಓ , ನಿನಗೆ ಮಾತು

ಬರುತ್ತೆ,ಅದು ಸ್ಪಷ್ಟವಾದ ಇಂಗ್ಲೀಷನಲ್ಲಿ “, ಅದಕ್ಕೆ ಉತ್ತರವಾಗಿ, “ನಿನ್ನ ಅಳಿಲು ಭಾಷೆ ಮೆಚ್ಚ ಬೇಕಾದದ್ದೇ” ಅಂತ ನನಗೆ ತಿರುಗು ಬಾಣ ಬಿಟ್ಟಿತು.

ಇದು ಕನಸು ಇರಬಹುದು ಎಂದು ಸಮಾದಾನ ಮಾಡಿಕೊಳ್ಳುತ್ತಿರುವಾಗ , ಚಿಪ್ಪಿ ನನ್ನ ಮನದಾಳವನ್ನು ಅರಿತಂತೆ ,” ಓ, ನಿನ್ನ ಪ್ರಪಂಚದಲ್ಲಿ ಎಲ್ಲಾ ಬೆರೇ ಥರನಾ” ಅಂತ ನನಗೇ ಸವಾಲು ಹಾಕಿತು.

“ ಇಲ್ಲಿ, ನನ್ನ ಮನೆಯಲ್ಲಿ, ನನ್ನ ಪಡಸಾಲೆಯಲ್ಲಿ?, ಎಂದು ಉದ್ಗಾರಿಸಿದಾಗ.

“ಅಲ್ಲ, ನಾವು ನಿನ್ನ ಪ್ರಪಂಚ ಬಿಟ್ಟು, ನಮ್ಮ ಪ್ರಪಂಚದಲ್ಲಿ ಇದ್ದೇವೆ “, ಎಂದು ಗಾಳಿಯಲ್ಲಿ ತೆಲುತ್ತ, ತೇಲುವುದು ಸಹಜ ಅನ್ನುವ ರೀತಿಯಲ್ಲಿ, ಮೃದುವಾದ ಧ್ವನಿಯಲ್ಲಿ, ಕಣ್ಣಲ್ಲಿ ಕಣ್ಣಿಟ್ಟು ಹೇಳಿತು. “ನಾನು, ನಿನ್ನ ಮಾರ್ಗ ದರ್ಶಕ”,

ಅದಕ್ಕೆ ನಾನು, “ಮಾರ್ಗ ದರ್ಶಕ!!”, ಸುತ್ತಲು ಒಂದು ಸಾರಿ ಕಣ್ಣು ಹಾಯಿಸಿ, ರಸ್ತೆಯಲ್ಲಿ ಆಕಪಕ್ಕದ ಮನೆಯವರು, ಅಥವಾ ಯಾರಾದರು ಓಡಾಡುತ್ತಿದ್ದಾರ, ನಮ್ಮನ್ನು ನೋಡಿ ನಗುತ್ತಿರುವವರ, ತಮಾಷೆ ಮಾಡುತ್ತಿದ್ದಾರ ಅಂತ ನೋಡಿದರೆ, ಯಾರೂ ಕಾಣಲಿಲ್ಲ, ಬರೀ, ನಾನು ಮತ್ತು ಚಿಪ್ಪಿ ಇಬ್ಬರೆ.

“ ಹೌದು, ನೀನು ನಮ್ಮ ಪ್ರಪಂಚಕ್ಕೆ ಬಂದಿರುವುದರಿಂದ, ನಿನಗೆ ಎಲ್ಲಾ ವಿಚಿತ್ರವಾಗಿ ಕಾಣುತ್ತಿದೆ, ಅಷ್ಟೇ”, ಎಂದು ಹೇಳಿತು.

“ನಿನ್ನ ಪ್ರಪಂಚ?”, ನಂಬಲಾರದೆ ಚಿಪ್ಪಿಯನ್ನೆ ನೋಡುತ್ತ ಕೇಳಿದೆ. ಚಿಪ್ಪಿ, ಏನು ಮತನಾಡದೆ , ನನ್ನ ಸಂದಿಗ್ಧವನ್ನು ಅರ್ಥ ಮಾಡಿಕೊಂಡ ಮೇಧಾವಿಯಂತೆ ಕುಳಿತು, ಸಮದಾನವಾಗಿ, ಅನುಕಂಪದಿಂದ ನನ್ನ ಕಡೆ ನೋಡಿತು.

ಕೊನೆಗೆ, ನಿಧಾನವಾಗಿ ಹೇಳಲೋ ಬೇಡವೋ ಅಂತ ಸ್ವಲ್ಪ ಹಿಂದೇಟು ಹಾಕುತ್ತಾ, ದೇವರು ನನಗೇಕೆ ಈ ಕಹಿ ಸತ್ಯ ಹೇಳುವ ಕೆಲಸ ಕೊಟ್ಟ, ಹಾಯಾಗಿ ಗಂದರ್ವ ಕನ್ಯೆಯರ ಜೊತೆ ಹಾಡುತ್ತಾ, ಕುಣಿಯುತ್ತಾ ಇರಬೇಕಾದ ನಾನು ಈ ಅಶುಭ ಸಂದೇಶ ಕೊಡುವ ಅಳಿಲಾಗಿ ಬಂದೆನಲ್ಲ ಅಂತ ಮನಸ್ಸಿನಲ್ಲೇ ಬೆಸೆರಿಸಿಕೊಂಡು, ಚಡಪಡಿಸುತ್ತಾ, “ಗ್ಯಾರಿ , ನೀನು ಸತ್ತು ಹೋಗಿ, ನಿನ್ನ ಲೌಕಿಕ ಪ್ರಪಂಚವನ್ನು ಬಿಟ್ಟು, ನಮ್ಮ ಅಲೌಕಿಕ ಪ್ರಪಂಚಕ್ಕೆ ಬಂದಿರುವೆ”,ಎಂದು ವಿಶಾದ ನಗೆಯಲ್ಲಿ ಹೇಳಿತು.

ನಾನು, ಅದನ್ನು ಕೇಳಿ, ಜೋರಾಗಿ ನಕ್ಕೆ, ಸಂತೋಷದಿಂದ ಅಲ್ಲ, ಇಂತಹ ವಿಚಿತ್ರ ಸನ್ನಿವೇಶಕ್ಕಾಗಿ. “ ಸತ್ತು? “, ನಾನು ಚೆನ್ನಾಗೆ ಇರುವೆನಲ್ಲ, ಯಾವ ಕತ್ತಲೆ ಸುರಂಗ ಮಾರ್ಗವನ್ನಗಲೀ, ಯಮನ ಪಾಶ ವಾಗಲಿ ನನ್ನ ಕರೆತರಲಿಲ್ಲವಲ್ಲ, ಎಲ್ಲಾ ಸಹಜವಾಗಿ ಕಾಣುತ್ತಿದೆ, ನನ್ನ ಮನೆ ಪಡಸಾಲೆಯಲ್ಲೆ ಕುಳಿತಿರುವೆ, ಚಿಪ್ಪಿ, “ನಾನು ಸತ್ತಿರುವೆ”, ಎಂದು ಏಕೆ ಹೇಳುತ್ತಿದೆ?

“ನಾನು ಬದುಕಿದ್ದೇನೆ, ಸತ್ತದ್ದು ಯಾವಾಗ?” ಎಂದು ಕೇಳಿದೆ.

“ ಇವತ್ತು ಬೆಳಿಗ್ಗೆ, ಆಸ್ಪತ್ರೆಯಲ್ಲಿ”. ಅಂತ, ನಿರ್ಭಾವದಿಂದ, ನಿರ್ದಿಷ್ಟವಾಗಿ ಹೇಳಿತು. ಅದರಲ್ಲಿ, ಕಪಟ, ನಾಟಕೀಯತೆ ಯಾವುದು ನನಗೆ ಕಾಣಲಿಲ್ಲ. ಸತ್ಯಕ್ಕೆ, ಮುಚ್ಚು ಮರೆ ಬೇಕಿಲ್ಲ ಅನ್ನುವಹಾಗೆ.

ನಾನು, ಒಂದು ಕ್ಷಣ ಬೆಚ್ಚಿ, ಸುಮ್ಮನೆ ಸೂರು ನೋಡುತ್ತಾ, ಸಿಡಿಲು ಬಡಿದವನಹಾಗೆ ಸ್ವಲ್ಪ ಹೊತ್ತು ಕುಳಿತೆ.

“ಅಂದರೆ, ನಾನು ನನ್ನ ಪ್ರಪಂಚ ಬಿಟ್ಟು, ಈ ಚಿಪ್ಪಿಯ ಪ್ರಪಂಚದಲ್ಲಿ ಇದ್ದೇನೆ, ಅಷ್ಟು ಸುಲಭವಾಗಿ ನನ್ನ ಮನಸ್ಸು ಈ ಸತ್ಯವನ್ನು ಒಪ್ಪಿಕೊಳ್ಳುವುದಕ್ಕೆ ಸಮ್ಮತಿಸಲಿಲ್ಲ. ಕಹಿ ಸತ್ಯ, ಹೇಗೆ ಅರಗಿಸಿಕೊಳ್ಳುವುದು? ಪ್ರತ್ಯಕ್ಷವಾಗಿ ಕಂಡರೂ ಪ್ರಮಾಣಿಸಿ ನೋಡು ಅನ್ನುವ ಹಾಗೆ, ನನ್ನ ಕೈಗಳನ್ನು ಮುಟ್ಟಿದೆ. ನನ್ನ ಎರಡು ಕೈಗಳು ಯಾವ ಅಡೆ ತಡೆ ಇಲ್ಲದೆ, ಗಾಳಿಯಲ್ಲಿ ಕೈ ಆಡಿಸುವ ರೀತಿಯಲ್ಲಿ , ಸರಾಗವಾಗಿ, ಒಂದರೊಳಗೊಂದು ಹೋಯಿತು.

ಆಗ ಅರಿವಾಯಿತು , ನಾನು, ನಿಜವಾಗಿ ಸತ್ತಿದ್ದೇನೆ ಎಂದು!!

ಹಾಗೆ ಸ್ವಲ್ಪ ಹೊತ್ತು ಗರಬಡಿದವನಂತೆ ಕುಳಿತು , ಕೊನೆಗೆ ಧೈರ್ಯಾ ಮಾಡಿ, “ನನಗೆ ಈಗಲೇ ಸಾಯುದಕ್ಕೆ ಇಷ್ಟ ಇಲ್ಲ ಅಂದರೆ ಏನು ಮಾಡುವೇ”, ಎಂದು ಕೇಳಿದೆ. ಚಿಪ್ಪಿ ಅತ್ಯಂತ ಅನುಕಂಪದಿಂದ ನನ್ನ ನೋಡಿ, “ಏಕೆ, ನಿನಗೆ ಲೌಕಿಕ ಪ್ರಪಂಚದಲ್ಲಿ ಇನ್ನೂ ಕೆಲಸ ಬಾಕಿ ಇದೆಯೇ?” ಇದು ಎಲ್ಲಾ ಜನಸಾಮಾನ್ಯರ ಮಾಮೂಲು ಪ್ರಶ್ನೆ ಅನ್ನುವ ಧ್ವನಿಯಲ್ಲಿ.

ಅವನ ಪ್ರಶ್ನೆಗೆ ಹೇಗೆ ಉತ್ತರ ಕೊಡಬೇಕೋ ತಕ್ಷಣ ತಿಳಿಯದೆ, ಅವನನ್ನೇ ನೋಡುತ್ತ , ನನಗೆ ಗೊತ್ತಿದ್ದರೆ ತಾನೇ ನಿನಗೆ ಹೇಳಬಲ್ಲೆ, ಆದರೂ ಹೀಗೆ ತಕ್ಷಣ ಹೊರಟು ಬಾ ಅಂದ್ರೆ? ಒಂದೂ ಮುನ್ನೆಚ್ಚರಿಕೆ ಇಲ್ಲದೆ, ನನ್ನ ಜೀವನ, ಹೀಗೆ abrupt ಆಗಿ ಕೊನೆಗೊಳ್ಳಲು ನಾನು ಅವಕಾಶ ಕೊಡಲ್ಲ,

ನಾನು ಜೀವನ ಪೂರ್ತಿ, ಉತ್ತಮವಾಗಿ ಬಾಳುವುದು ಹೇಗೆ, ಪ್ರೀತಿ ಅಂದರೇನು, ನಿಸ್ವಾರ್ಥವಾಗಿ ಒಂದು ಚೂರು ಭಯವಿಲ್ಲದೆ, ಅಹಂ ಇಲ್ಲದೆ ಬದುಕುವುದನ್ನು ಕಲಿಸುವ ಗುರುವನ್ನು ಹುಡುಕಿಕೊಂಡು ಹೋಗುತ್ತಿರುವಾಗ, ತಕ್ಷಣ ಸಾಯಿ ಅಂದರೆ? ನಿನೋ, ಅದು ಕೇವಲ ಅಳಿಲು, “ನಿನಗೆ, ನಾನೇ ಸ್ವರ್ಗ ತೋರೋ ಮಹಾತ್ಮ” ಅಂತ ಹೇಳುತ್ತಿರುವೆ.

“ ಒಬ್ಬ ದೊಡ್ಡ ಮನುಷ್ಯ, ಕೊನೇ ಪಕ್ಷ ಒಬ್ಬ ಪ್ರಮುಖ ಸಿನೆಮಾ ನಾಯಕ ನಟನಾದರೂ ಆಗಿದ್ದರೆ, ನನ್ನ ಅಹಂಗೆ ತೃಪ್ತಿ ಕೊಡುತ್ತಿತ್ತು . ಹಾಗಂತ, ನಾನೇನು ನಿನ್ನನ್ನು ಕೀಳು ಅಂತ ಹೇಳುತ್ತಿಲ್ಲ, ಆದರೂ ನನ್ನ ಘನತೆಗೆ ತಕ್ಕ ಹಾಗೆ, ಒಂದು ಚೂರು, ಜನಪ್ರಿಯ jazz band ಸಮೇತ ಯಾರಾದರೊ ಬಂದು ಕರೆದಿದ್ದರೆ ಸಾವನ್ನು ಒಪ್ಪಿಕೊಳ್ಳುತ್ತಿದ್ದೆ”, ಎಂದು ಹೇಳಿದೆ.

ಚಿಪ್ಪಿಯ ಮುಖ ತಕ್ಷಣ ಪೆಚ್ಚಾಯಿತು, ಸ್ವಲ್ಪ ನೋವಿನಿಂದ ನನ್ನ ಕಡೆ ನೋಡಿ, “ ಮಿಸ್ಟರ್ ಗ್ಯಾರಿ, ನನ್ನ ಪ್ರೀತಿಯ ಗೆಳಯ, ನಿನ್ನ ನೋಡಿದರೆ ನನಗೆ ಸಂಕಟ ಆಗುತ್ತಿದೆ, ಇಷ್ಟು ವಯಸ್ಸಾದರೂ ನಿನೆಗೆ ಇನ್ನೂ ಬುದ್ಧಿ ಬಂದಿಲ್ಲ ಅಂತ, ನೀನು ಹೇಗೆ ಹೋಗುವೆ ಅನ್ನುವುದು ಮುಖ್ಯಾಆಲ್ಲ, ಎಲ್ಲಿಗೆ ಅನ್ನುವುದು ಮುಖ್ಯ, ನಿನ್ನ ನಿಜವಾದ ಬೆಲೆ , ನಿನ್ನ ಮೋಕ್ಷ ದಲ್ಲಿ, ನಿನ್ನ ಆತ್ಮದಲ್ಲಿ ಇದೆ. ಅಂತ ಹೇಳಿ ಮೌನವಹಿಸಿತು. ಆ ಶೀತಲ ಮೌನವನ್ನು ನಾನು ಎಂದು ಅನುಭವಿಸರಲಿಲ್ಲ, ಯೋಚನೆ ಮಾಡಿದೆ, ಹೌದು ಅವನು ಹೇಳುತ್ತಿರುವುದು ನೂರಕ್ಕೆ ನೂರು ಸತ್ಯ. ನಾನು ಯಾಕೆ ಯಮ ಬಂದು, ನನ್ನನ್ನು ಪುಷ್ಪಕ ವಿಮಾನದಲ್ಲಿ ಕರೆದುಕೊಂಡು ಹೋಗುತ್ತಾನೆ ಅಂತ ಅಂದುಕೊಡಿದ್ದೇ, ನಾನೇನು ಹರೆಯದ ಹುಡುಗ ವಸಂತೋತ್ಸವಕ್ಕೆ ಹೋಗು ಹಾಗೆ ಲಿಮೊದಲ್ಲಿ ಪರಲೋಕಕ್ಕೆ ಹೊಗುತ್ತಿನಿ, ಅಂತ ಅಂದು ಕೊಂಡಿದ್ದಿನಾ, ಒಂದು ಕಡೆ ನಗು ಮತ್ತು ಆಳು ಒಟ್ಟಿಗೆ ಬಂತು. ಮೂರ್ಖ, ಶತ ಮೂರ್ಖ ಅಂತ ನನ್ನ ನಾನೇ ಬೈದುಕೊಂಡೆ.

ಚಿಪ್ಪಿ , ಕರುಣೆಯಿಂದ, “ ನಾನೇನು, ಗೌತಮ ಬುದ್ದನಾ, ನಿನಗೆ ಜ್ಞಾನೋದಯ ಮಾಡಿಸುವುದಕ್ಕೆ” ಎಂದು ಕಣ್ಣು ಹೊಡೆದು ಕೇಳಿತು. ಬೇಕಾದರೆ, ಬುದ್ಧ ನ ಜೊತೆ ಮಾತನಾಡುವುದಕ್ಕೆ ಏರ್ಪಾಡು ಮಾಡುತ್ತೇನೆ, ಎಂದು ಆಶ್ವಾಸನೆ ಕೊಟ್ಟಿತು.

ನಾನು ಸಂತೋಷ ದಿಂದ, ನಿಜವಾಗಲೂ, ಬುದ್ಧ ಹಾಗೂ ನಾನು ಇಬ್ಬರೂ ಇಹ ಲೋಕ ಬಿಟ್ಟಿರುವುದರಿಂದ, ನಾನೇನು ಮತ್ತೆ ಸಾಯಬೇಕಿಲ್ಲ ಅಂತ ಹೇಳಿ ನನ್ನ ಹಾಸ್ಯ ಚಟಾಕಿಗೆ ನಾನೇ ನಕ್ಕು ಕೇಳಿದೆ.


ಚಿಪ್ಪಿ, ತನ್ನ ಕೈಗಳನ್ನು, ಗಲ್ಲಕ್ಕೆ ಇಟ್ಟು, ದೊಡ್ಡ ಪಂಡಿತನಂತೆ, ನೀನು ಇನ್ನೂ ಕಲಿಯುವುದು ಸುಮಾರು ಇದೆ, ಮನಸ್ಸು ಪಕ್ವ ಆಗಿಲ್ಲ, ಬುದ್ಧನ ಹತ್ತಿರ ಕೇಳಿ ಐದು ದಿನದಲ್ಲಿ ಬರುತ್ತೀನಿ, ಮತ್ತೆ ಸಿಗುವ, ಎಂದು ಹೇಳಿ, ಹೇಗೆ ನನ್ನ ಎದುರು ಪ್ರತ್ಯಕ್ಷ ಆದನೊ, ಹಾಗೆ ಕ್ಷಣದಲ್ಲಿ ಮಾಯಾವಾದ.

ಏನು ಆಗುತ್ತಿದೆ ಎಂದು ಗ್ರಹಿಸುವುದರಲ್ಲಿ, ನಾನು ಹಾಸ್ಪಿಟಲ್ ರಿಕವರೀ ಕೋಣೆಯಲ್ಲಿ ಮಲಗಿದ್ದೆ. ಎಚ್ಚರ ಆದಾಗ, ಆ ಔಷದಿ ವಾಸನೆ, ಕೈಗೆ ಗ್ಲೂಕೋಸ್ ಕೊಳವೆ, ಹೃದಯ ಬಡಿತ ತೋರಿಸುವ ಯಂತ್ರ, ಉಸಿರಾಡುವ ಯಂತ್ರ, ಹೀಗೆ ಒಂದೊಂದಾಗಿ ಕಾಣಿಸಿತು. ನನ್ನ ಕಡೆಯೇ ನೋಡುತ್ತ ಕುಳಿತ್ತಿದ್ದ ಸಪ್ಪೆ ಮೋರೆಯ ನರ್ಸ್, ಭೂತ ಕಂಡಹಾಗೆ ಭಯದಿಂದ ನನ್ನ ಕಡೆ ಕಣ್ಣು ಹಾಯಿಸಿ, ಪಕ್ಕದಲ್ಲೇ ಇದ್ದ ಇನ್ನೊಬ್ಬ ನರ್ಸ್ಗೆ, ಬೆಳಿಗ್ಗೆ ೧೦.೩೦ಕ್ಕೆ ಪ್ರಾಣ ಹೊರಟುಹೋಗಿತ್ತು, ಲಂಗ್ಸ್ ಕೋಲ್ಯಾಪ್ಸ ಆಗಿತ್ತು, ಎಷ್ಟು ಪ್ರಯತ್ನ ಪಟ್ಟರು ಪ್ರಾಣ ಬರಲೇಯಿಲ್ಲ. ನಮಗೆಲ್ಲ ಗಾಬರಿ, ಇಂತಹ ರೋಟಿನ ಪ್ರೊಸೀಜರ್, ಹೇಗೆ complicate ಆಗುತ್ತೆ ಅಂತ ನಂಬುವುದಕ್ಕೂ ಸಾದ್ಯಾ ಇಲ್ಲ. ದುರಂತ ಘಟನೆಯನ್ನು ವಿವರಿಸುತ್ತ ಇದ್ದ ಅವಳಿಗೆ ನಾನು ಕಣ್ಣು ಬಿಟ್ಟಿದ್ದು ನೋಡಿ ಗಾಬರಿ ಆದಳು.

ಅಷ್ಟು ಹೊತ್ತಿಗೆ, ಒಬ್ಬ Asian ಡಾಕ್ಟರ್ ಒಳಗೆ ಬಂದಳು, ಯಾರಿಗೂ ಅವಳ ಪರಿಚಯ ಇದ್ದಹಾಗೆ ತೋರಲಿಲ್ಲ. ಅವಳ ಹೆಸರು ತಿಳಿಸುವ ನೇಮ್ ಟ್ಯಾಗ್ ಬಿಳಿ ಕೋಟ್ ಮೇಲೆ ಇರಲಿಲ್ಲ. ನನ್ನ ನೋಡಿಕೊಳ್ಳುತ್ತಿದ್ದ ನರ್ಸ್ಗಳು ಒಂದು ಕ್ಷಣ ಮಂತ್ರಕ್ಕೆ ಒಳಗಾದ ಬೊಂಬೆಗಳಂತೆ ವಿಚಲಿತರಾದರು. ಡಾಕ್ಟರ್, ಒಂದು ಚೀಲದಲ್ಲಿ ಬಿದಿರಿನ ಕೊಳವೆ ಮತ್ತು ಭಸ್ಮ, ೬೧೯ನೇ ದಶಕದ ಔಷದಿಯನ್ನು, ಸಾವಿರಾರು ಸಲ ಮಾಡಿದ ಪಂಡಿತಳಂತೆ, ಯಾವುದೇ ಭಾವನೆ, ಆತಂಕ ಇಲ್ಲದೆ, ಚುಮಕಿಸಿದಳು, ಒಂದು ಕ್ಷಣದಲ್ಲಿ ನನ್ನ ಶ್ವಾಸಕೋಶದಲ್ಲಿ ಆಮ್ಲಜನಕ ತುಂಬಿ, ಸತ್ತ ಲಕ್ಷ್ಮಣ ಸಂಜೀವಿನಿ ಕುಡಿದು ಎದ್ದು ಕುಳಿತ ಹಾಗೆ, ನನ್ನ ಪ್ರಾಣ ಬಂತು. ನರ್ಸ್ ಮುಖದಲ್ಲಿ ಆಶ್ಚರ್ಯ, ಸಂತೋಷ ಒಟ್ಟಿಗೆ ಬಂದು, ಹೆಸರು ಇಲ್ಲದ Asian ಡಾಕ್ಟರ್ಗೆ ಅಭಿನಂದನೆ ಅರ್ಪಿಸಿವುದರ ಒಳಗೆ, ಡಾಕ್ಟರ್ ಹೇಗೆ ಪ್ರತ್ಯಕ್ಷ ಆದರೋ, ಅಷ್ಟೇ ವೇಗದಲ್ಲಿ ಮಾಯಾವಾದರು,ಯಾವುದೊ ಸುಳಿವು ಕೊಡದೆ. ನರ್ಸ್ಗಳು ಮಾತನಾಡದೆ ಒಂದು ಕ್ಷಣ ಮಂಕು ಬಡಿದವರಂತೆ ಮೌನವಾಗಿ ನಿಂತು, ಸ್ವಲ್ಪ ಸಮಯದ ನಂತರ ಚೇತರಿಸಿಕೊಂಡ ಮೇಲೆ, ಇದನ್ನ ಹೇಗೆ ಚಾರ್ಜ್ ಶೀಟ್ನಲ್ಲಿ ಬರೆಯುವುದು, ಬರೆದರೂ ಯಾರು ನಂಬುತ್ತಾರೆ ಅಂತ ಕಣ್ಣು ಸನ್ನೆಯಲ್ಲಿ ಮಾತಾಡಿಕೊಂಡರು.

**ಪುಸ್ತಕದ ಆಗಮನ!!..**

ಒಂದು ದಿನ ಇದ್ದಕ್ಕಿದ್ದಹಾಗೆ, ಒಂದು ಪುಸ್ತಕ ಮೇಯ್ಲ್ ನಲ್ಲಿ ಬಂತು. ನಾನು ಯಾವ ಪುಸ್ತಕವನ್ನು Amazon ನಲ್ಲಿ ಕರೀದಿ ಮಾಡಿರಲಿಲ್ಲ, ಯಾರು, ಎಲ್ಲಿಂದ ಕಳುಹಿಸಿರಬಹುದು ಎಂದೂ ಗೊತ್ತಾಗಲಿಲ್ಲ, ಪುಸ್ತಕದ ಒಳಗೆ ಒಂದು cover ನಲ್ಲಿ, ಕೈ ಬರಹದಲ್ಲಿ ಬರೆದಿರುವ ಪತ್ರ ಇತ್ತು.




“ಮಿಸ್ಟರ್ ಗ್ಯಾರಿ,
ನೀನು ಹುಡುಕುತ್ತಿರುವ ವಿವೇಕ ನಿನ್ನಲ್ಲೇ ಇದೆ . ಗುರು ನಿನ್ನಲ್ಲಿ ಇರುವ ವಿವೇಕ ಗುರುತಿಸ ಬಹುದೇ ಹೊರತು, ನಿನ್ನಲ್ಲಿ ತುಂಬುವುದಕ್ಕಾಗುವುದಿಲ್ಲ.
ನಿನ್ನ ಜೀವನ ಎಲ್ಲಾ ರೀತಿಯಲ್ಲಿ ಸರಿಯಾಗಿಯೇ ಇದೆ. ಸುಮ್ಮನೆ ಯೋಚನೆ ಮಾಡುವುದನ್ನು ನಿಲ್ಲಿಸು. ನೀನು ಸರಿಯಾದ ದಾರಿಯಲ್ಲಿ ಹೋಗುತ್ತಿರುವೆ. ದೇವರ ಮೇಲೆ ಭಾರ ಹಾಕಿ ಇರುವಷ್ಟು ದಿನ ಸಂತೋಷವಾಗಿರುವುದನ್ನು ಕಲಿ. ಇತಿ ನಿನ್ನ ಹಿತೈಷಿ, ಬುದ್ಧ, ಜೀಸಸ್, ಸಂತ ಕುಮಾರ, ಕನ್ಫ್ಯೂಷಿಯಸ್, ಮತ್ತು ಇತರ ಧಾರ್ಮಿಕ ವಿದ್ವಾಂಸರುಗಳು.”

ಆ ಪತ್ರವನ್ನೇ ಸ್ವಲ್ಪ ಹೊತ್ತು ನೋಡುತ್ತಾ ಕುಳಿತೆ, ತಕ್ಷಣ ಚಿಪ್ಪಿ, ನನ್ನ ಮಾರ್ಗ ದರ್ಶಕ ಅಳಿಲು ನೆನಪಿಗೆ ಬಂತು. “ ನೀನು ಹೇಗೆ ಬೇರೆಯವರಿಗೆ ಕಾಣುತ್ತಿ ಅನ್ನುವುದು ಮುಖ್ಯ ಅಲ್ಲ. ನಿನ್ನ ಅಂತರಂಗದಲ್ಲಿ ನಿನ್ನ ಬಗ್ಗೆ ಸಂಪೂರ್ಣ ವಿಶ್ವಾಸ ಇದ್ದರೆ ಸಾಕು. ನಿನ್ನ ಮನಸ್ಸು ಶುದ್ಧ ಇದ್ದರೆ ಜೀವನ ಏರು ಪೇರು ಇಲ್ಲದೆ ನಡೆಯುತ್ತೆ. ” ಅದನ್ನು ನೆನೆದು, ಇದೆಲ್ಲ ನನಗೆ ಅರಿವಿದ್ದರೂ ಯಾಕೆ ಸುಮ್ಮನೆ ಜೀವನದ ಅರ್ಥವನ್ನು ಬೇರೆಯಲ್ಲೊ ಹುಡುಕುತ್ತಿದ್ದೇ? ಪ್ರತಿಯೊಂದು ಪ್ರಶ್ನೆಗೆ ದೇವರು ನಮ್ಮಲ್ಲೇ ಉತ್ತರವನ್ನು ಕೊಟ್ಟಿರುತ್ತಾನೆ. ಇದನ್ನು ತಿಳಿಯುವುದಕ್ಕೆ ಸುಮಾರು ಎಪತ್ತು ವರ್ಷಗಳು ಬೇಕಾಯಿತಾ? ಎಂದು ನಿಟ್ಟಿಸುರು ಬಿಟ್ಟು, ಕೊನೆಗೂ ಉತ್ತರ ಸಿಕ್ಕಿತಲ್ಲಾ ಅಂತ ಸಮದಾನಮಾಡಿಕೊಂಡೆ



**ಮೂಲ ಕಥೆ: ಗ್ಯಾರಿ ಕೋವೆಕ (Gary Kovach)**


ಕವನ
ಸಂಕಲನ



**ಶಶಿಚಂದ್ರ**
ನ್ಯೂ ಜೆರ್ಸಿ

# ನಮ್ಮ ಬೆಂಗಳೂರು ಭೇಟಿಯ ನೆನಪುಗಳು

## ನಮ್ಮ ಬೆಂಗಳೂರು ಭೇಟಿ

ಬೆಂಗಳೂರಿಗೆ ನಾವು ಬಂದ್ರೆ
ಇಲ್ಲಿ ಊರೆಲ್ಲ ಓಡಾಡ್ತ ಇದ್ರೆ
ಅನುಭವ ಹೇಗಾಗುವುದಂದ್ರೆ
ಓಡಾಡ್ತ ಗುಡಿ ಗೋಪುರಗಳ ಕಂಡ್ರೆ
ತಕ್ಷಣ ಕೈ ಮುಗಿಬೇಕು ಅನ್ನೋ ಭಕ್ತಿ ಉಕ್ಕಿ ಬರುತೆಂದ್ರೆ
ಇಲ್ಲಿ ಹೋಟೆಲ್ಗಳು ಪಬ್ ಗಳು ಎಸ್ಟ್ಟವೆ ಅಂತಂದ್ರೆ
ತಪ್ಪಾಗಲ್ಲ ತಿಂಡಿ ಪಾತ್ರೆಯೊಳಗೆ ಬಿದಗಂದ್ರೆ
ಇಲ್ಲಿ ಮಾರ್ಕೆಟ್ ನೋಡ್ತ ಹೋದ್ರೆ
ಕಂಡಿದ್ದೆಲ್ಲಾ ತಗೋಬೇಕು ಅನ್ಸುತೆಂದ್ರೆ
ನಮ್ಮ ಬೆಂಗಳೂರಲ್ಲಿ ಎಷ್ಟು ದಿನ ಇದ್ರು ಸಾಲದು ಅಷ್ಟು ಚೆನ್ನಾಗಿದೆ ಇಲ್ಲಿರಲು ಏನು ಇಲ್ಲ ತೊಂದ್ರೆ
ಆದ್ರೆ ಹೋಗಲೇಬೇಕಲ್ಲ ನಾವು ನಮ್ಮೂರಿಗೆ ಏಕೆಂದ್ರೆ
ನಾವು ನೆಲೆಸಿದ್ದೀವಲ್ಲ ನಮ್ಮ ನೆಲೆ ಕಂಡುಕೊಂಡಿದ್ದೀವಲ್ಲ ನಾವೆಲ್ಲ ಅಲ್ಲಿ ಆದ್ರೆ
ಅದೇ ನೋಡಿ ಜೀವನದ ಪಾಠ ಕೆಲಸ ಮುಗಿದ ಮೇಲೆ ಹೋಗಲೇ ಬೇಕಾಲ್ಲ ನಮ್ ಮನೆಗೆ ನಾವಾದ್ರೆ

## ನಮ್ಮ ಬೆಂಗಳೂರು ರೆಸ್ಟೋರೆಂಟ್

ಬೆಳಗ್ಗೆ ಎದ್ದರೆ ಬೆಂಗಳೂರಲ್ಲಿ ಅನಿಸುವುದು ಇಲ್ಲಿ ತಿನ್ನಲು ರೋಡ್ ರೋಡ್ ನಲಲ್ಲಿರುವ
ರೆಸ್ಟೋರೆಂಟ್ಗಳಲ್ಲಿನ ಮಸಾಲಾ ದೋಸೆ
ಮಧ್ಯಾಹ್ನ ಅನಿಸುವುದು ಸವಿಯಲು ಈ ಎಲ್ಲ ಹೋಟೆಲ್ಗಳಲ್ಲಿ ಸಿಗುವ ದಕ್ಷಿಣ ಭಾರತೀಯ ಬಾಳೆ ಎಲೆ
ಊಟದ ಸೊಗಸೆ
ಸಂಜೆಯಾದರೆ ಅನಿಸುವುದು ಎಲ್ಲೆಡೆ ಇರುವ ಪಬ್ಗಳಿಗೆ ಹೋಗಲು ಆಸೆ
ಆದರೆ ನಮಗೆ ವಿಸಿಟರ್ಸ್ಗೆ ಇದೆಯಲ್ಲ ಸವಿಯಲು ಕೆಲವೆ ಕೆಲ ದಿನಗಳಲಿ ಸಮಯದ ಸಮಸ್ಯೆ
ಜೊತೆಗೆ ಈ ತಿಂಡಿ ತೀರ್ಥಗಳ ಗಮನಿಸಿ ನನಗನಿಸಿತು ಬೆಂಗಳೂರು ಜಸ್ಟ್ not IT BT ಸಿಟಿ
ಅಂಡ್ also ಜಸ್ಟ್ not ಗಾರ್ಡನ್ ಸಿಟಿ
ಈಗ ಆಗಿದೆ ನಮ್ಮ ಬೆಂಗಳೂರು spicy ಸಿಟಿ
ಎಂಜಾಯ್ ಎವ್ರಿ ಥಿಂಗ್ according to your ಕೆಪ್ಯಾಸಿಟಿ (capacity)

## ಬೆಂಗಳೂರಿನ ಮಲ್ಲೇಶ್ವರಂ ನೆನಪುಗಳು

ನಮ್ಮದು ಇತ್ತು ಮನೆ in ಮಲ್ಲೇಶ್ವರಂ 11th ಕ್ರಾಸು
ಬೆಳಗೆದ್ದರೆ ಸಾಕು ತಿಂಡಿ ತಿನ್ನಲು ಹೋಗುತಿದ್ದೆವು ಜನತಾ ಹೋಟೆಲ್, CTR ಹೋಟೆಲ್ ಅಥವಾ ವೀಣಾ ಸ್ಟೋರ್ಸು
ಮಧ್ಯಾಹ್ನದ ಊಟಕೆ ಇತ್ತು ಸಾಕಷ್ಟು ಎಲ್ಲ ಕ್ರಾಸ್ ಗಳಲಿ ಊಟದ ಮೆಸ್ಸು
ಸ್ನಾಕ್ಸ್ ತಿನ್ನಲು ಇತ್ತಲ 7th ಕ್ರಾಸ್ ಗೋಮಾತ ಜ್ಯೂಸು ಸೆಂಟರ್ ಹಾಗು ಆಶಾ ಸ್ವೀಟ್ಸು
ಶಾಪಿಂಗ್ಗೆ ವೆಜಿಟೇಬಲ್ಸು, ಇತ್ತಲ ಸಂಪಿಗೆ ರೋಡು ಮಲ್ಲಿಗೆ ರೋಡು ಸ್ಟ್ರೀಟ್ಸು
ಓಡಾಡಲು ಸಿಗುತಿತ್ತಲ್ಲ ಎಲ್ಲ ಕಡೆಗೆ ಸಿಟಿ ಬಸ್ಸು
near ಮಲೇಶ್ವರಂ ಸರ್ಕಲ್ ಪಾಸ್ಸು
ವಿಡಿಯೋದಲ್ಲಿ ಹೇಳಿದ ಹಾಗೆ ಮಲ್ಲೇಶ್ವರಂ ಲೈಫ್ ಫಸ್ಟ್ ಕ್ಲಾಸು
ಈಗಲೂ ನಮ್ಮ ಬೆಂಗಳೂರು ಭೇಟಿಯಲಿ ನಾವು ಮಾಡುವುದೇ ಇಲ್ಲ ಮಲ್ಲೇಶ್ವರಂ ಭೇಟಿಯಾ ಮಿಸ್ಸು



ಚಿತ್ರ ಕೃಪೆ : ಅಂತರ್ಜಾಲ



ಎಂ.ವಿ. ಶಶಿಭೂಷಣ್ ರಾಜು

# ಎಲ್ಲರೂ ಹೊರಡುತ್ತಾರೆ

ಎಲ್ಲರೂ ಹೊರಡುತ್ತಾರೆ
ಕೆಲವರು ಮೌನವಾಗಿ
ಕೆಲವರು ಶಬುದ ಮಾಡುತ
ಕೆಲವರು ಯಾರಿಗೂ ತಿಳಿಯದೆ
ತಿಳಿಸದೆ

ಆದರೂ ವೇದ್ಯವಾಗುತ್ತದೆ
ಅವರ ಇಲ್ಲದಿರುವಿಕೆ

ಸಮಯ ಮುನ್ಸೂಚನೆ ಕೊಡುವುದಿಲ್ಲ,
ಸಮಯದರಿವು
ಎಲ್ಲರಿಗೂ ಇದೆ
ಆದರೂ, ನಾವೇ ನಿರಂತರ ಎಂದು ಬೀಗುತ್ತೇವೆ

ಹೊರಡುವವರ ನೆನೆಪು ಕಾಡುತ್ತದೆ,
ಹೊರಡಲು ತಯಾರಿ ನಡೆಸುತ್ತಿರುವವರ
ಜೊತೆ ಕಳೆಯುವ ಒಂದು ಕ್ಷಣ
ಎದೆ ತುಂಬುತ್ತದೆ ಸದಾ

ಸರದಿಯಲ್ಲಿ ಎಲ್ಲರೂ ನಿಲ್ಲಬೇಕು
ಸರದಿ ಮುಗಿಯುವುದಿಲ್ಲ
ಸರದಿಯಲಿ ಜೊತೆ ಇರುವವರಿಗೆ
ನಗೆ ಚೆಲ್ಲಿದರೆ
ಅಷ್ಟು ಸಾಕು
ಸರದಿ ಸಾಗುತ್ತದೆ ಹಿತವಾಗಿ



**ಓಂಕಾರಮ್ಮ ಆರ್.ಎಸ್**
ದಾವಣಗೆರೆ.

# ತಾಯಿಗಿಂತ ದೇವರಿಲ್ಲ

*...ಜನನಿ ತಾನೆ ನಮ್ಮ ದೈವ
ಜನನಿ ತಾನೆ ನಮ್ಮ ಗುರುವು
ಜನನಿಯಿಂದ ಪಾಠ ಕಲಿತ
ಜನರು ಧನ್ಯರು.....

*ತಾಯಿಗಿಂತ ಮಿಗಿಲಾದ ದೇವರಿಲ್ಲ

*ಒಬ್ಬ ತಾಯಿ ನೂರು ಗುರುಗಳಿಗೆ ಸಮಾನ
...

ಕರುಳ ಕುಡಿಗೆ ಅಮೃತವನುಣಿಸಿ
ಜೀವಕ್ಕೆ ಜೀವವಾಗಿ ಪೊರೆದು
ಕಂದನ ನಗುವಿನಲ್ಲಿ ತನ್ನ
ಕಷ್ಟಗಳ ಮರೆತು...ತನ್ನ ತುತ್ತ
ಅವನಿಗಿತ್ತು..ಹಗಲು ಇರುಳು
ದೇವರಂತೆ ಕಾಯ್ವ..ದೇವಿ ಅವಳು...
ತ್ಯಾಗ,ಕರುಣೆ, ಮಮತೆಯಿಂದ ಸಲಹುವ
ಶಕ್ತಿ ಸ್ವರೂಪಿಣಿ,,ಧಾರುಣಿ..ಅಮೃತವರ್ಷಿಣಿ
ತನ್ನ ತೋಳ ತೆಕ್ಕೆಯಲ್ಲಿ ..ಒಡಲಕುಡಿಗೆ
ಸುರಕ್ಷೆ ಸುಖದ ಸ್ಪರ್ಷ ನೀಡೋ ಸೌಖ್ಯ ದಾಯಿನಿ
ಮೊದಲ ತೊದಲ ನುಡಿಯ ಮಾತೃಭಾಷೆ
ಕಲಿಸೋ ಕಲ್ಪವಲ್ಲಿ..ಕಾರುಣ್ಯ ಸಿಂಧು ಅವಳು
ಅವಳಿಗಿಂತ ಮಿಗಿಲಾದ ಬಂಧುವಿಲ್ಲ
ಪದಗಳಿಗೆ ನಿಲುಕದ...ಹಿರಿಮೆ ನಿನ್ನದು
ನಿನ್ನ ಹರಕೆಯ ನೆರಳಲ್ಲಿ ನಡೆವಾ
ಬದುಕು ನಮ್ಮದು....





**ಡಾ.ಸುಧಾ.ವಿ.ಆರ್**
ಹಾಸನ

# ತಾವರೆ

**ಕೆ**ಸರಲ್ಲಿ ಹುಟ್ಟಿ
ಶುಭ್ರ
ಸುಂದರವಾಗಿ
ಅರಳುವ
ನಿನ್ನ ಅಂದ
ಏನು ಬಣ್ಣಿಸಲೇ?
ಲಕುಮಿಗೆ ಪ್ರಿಯವಾದ
ಕುಸುಮ ಕೋಮಲೆ

ನೀರ ಮೇಲೆ
ತೇಲುವಂತಿರುವ ಎಲೆ
ನೀರಿನ ಸಾರವ
ಹೀರಿ
ಶೋಭಿಸುವ
ಚಂಚಲೆ

ವಿಶಾಲ,ದುಂಡಗಿನ
ಹಸಿರು ಎಲೆಗಳ
ಮೇಲೆ ಮುತ್ತಿನಂತೆ
ನೀರ ಹನಿಗಳು
ನಸುಕಿನಲ್ಲಿ ರವಿಕಿರಣಕ್ಕೆ

ಮಂದಹಾಸ ಬೀರುತ,
ಗಾಳಿಯಲ್ಲಿ ತೇಲಿಬರುವ
ಕಂಪು
ಕೊಳದಲ್ಲಿ
ತಂಪು

ಹಾಲ್ಗಡಲ ಮಂಥನದಿ
ಉದಿಸಿದ ಕಮಲಾಸನೆಗೆ
ಪ್ರಿಯವಾದ ಸೊಬಗಿ
ಕೆಂದಾವರೆ.
ಪ್ರಕೃತಿಯ ಲಯಕ್ಕೆ
ಸ್ಪಂದಿಸುವ
ಕಮಲೆ.

# ಅಡಿಗೆ ಅರಿಷ್ಟ





**ಕೆ. ವಿ. ಲಕ್ಷ್ಮಿ ಶಂಕರ್**
ಬೆಂಗಳೂರು.

# ಮಾವಿನ ಕಾಯಿ ಚಟ್ನಿ

ಬೇಕಾಗುವ ಪದಾರ್ಥಗಳು :
1. ಗಿಣಿ ಮಾವಿನಕಾಯಿ - 1(medium)
2. ಬೆಳ್ಳುಳ್ಳಿ – ೬ ಎಸಳು
3. ಸಾಂಬಾರ್ ಈರುಳ್ಳಿ - 1
4. ಸಾರಿನಪುಡಿ - ಖಾರಕ್ಕೆ ತಕ್ಕಷ್ಟು
5. ಉಪ್ಪು - ರುಚಿಗೆ ತಕ್ಕಷ್ಟು



ಒಗ್ಗರಣೆಗೆ:
6. ಎಣ್ಣೆ – ೪ ಟೇಬಲ್ ಸ್ಪೂನ್
7. ಸಾಸಿವೆ - ೧ /೨ ಟೀ ಸ್ಪೂನ್
8. ಜೀರಿಗೆ ಪುಡಿ -೧ /೪ ಟೇಬಲ್ ಸ್ಪೂನ್
9. ಮೆಂತ್ಯ ಪುಡಿ – ೧ /೪ ಟೀ ಸ್ಪೂನ್
10. ಬ್ಯಾಡಗಿ ಮೆಣಸಿನಕಾಯಿ – ೪
11. ಇಂಗು ಪುಡಿ- ೧ /೪ ಟೀ ಸ್ಪೂನ್
12. ಕರಿಬೇವಿನ ಸೊಪ್ಪು - ೨ ಎಸಳು

ಮಾಡುವ ವಿಧಾನ :

ಮಾವಿನಕಾಯಿ, ಸಾರಿನ ಪುಡಿ, ಬೆಳ್ಳುಳ್ಳಿ, ಈರುಳ್ಳಿ, ಉಪ್ಪು ಹಾಕಿ ರುಬ್ಬಿ ಬೇಕು, ನಂತರ ಒಗ್ಗರಣೆಗೆ ಎಣ್ಣೆ, ಸಾಸಿವೆ, ಕರಿಬೇವು, ಇಂಗುಪುಡಿ, ಒಣ ಮೆಣಸಿನಕಾಯಿ, ಜೀರಿಗೆ ಪುಡಿ, ಮೆಂತ್ಯ ಪುಡಿ ಹಾಕಿ ಸಣ್ಣ ಉರಿಯಲ್ಲಿ ಹುರಿದು ನಂತರ ರುಬ್ಬಿದ ಮಾವಿನಕಾಯಿ ಮಿಶ್ರಣ ಹಾಕಿ, ೩ -೪ ನಿಮಿಷ ಒಗ್ಗರಣೆಯಲ್ಲಿ ಬೇಯಿಸಿ ,ಇಳಿಸಿ. ಅನ್ನಕ್ಕೆ ಸ್ವಲ್ಪ ತುಪ್ಪ ಬೆರೆಸಿ ಚಟ್ನಿಯೊಂದಿಗೆ ಸವಿಯಿರಿ.

Note:
1. ನೀರು ಹಾಕಬಾರದು
2. ಬೇಳೆ ಸಾರು, ಚುರಮುರಿ ಜೊತೆಯೂ ಸವಿಯಬಹುದು.



**ಅಪರ್ಣ ಅನೂಪ್**
ನ್ಯೂ ಜೆರ್ಸಿ

# ಒತ್ತು ಶಾವಿಗೆ



ಚಿತ್ರ ಕೃಪೆ : ಅಂತರ್ಜಾಲ

ಒತ್ತು ಶಾವಿಗೆ ನಮ್ಮ ಕರ್ನಾಟಕದ ಒಂದು ಜನಪ್ರಿಯ ಮತ್ತು ಸಾಂಪ್ರದಾಯಿಕ ಉಪಹಾರವಾಗಿದೆ. ಮೃದುವಾದ ಮತ್ತು ನೂಡಲ್ಸ್‌ನಂತಹ ಎಳೆಗಳನ್ನು ಹೊಂದಿರುವ ಇದು ನೋಡಲು ಆಕರ್ಷಕ ಮತ್ತು ತಿನ್ನಲು ಬಹಳ ರುಚಿಕರ.

ಬೇಕಾಗುವ ಸಾಮಗ್ರಿ :

ಅಕ್ಕಿ ಹಿಟ್ಟು - 1 ಲೋಟ
ನೀರು - 1.5 ಲೋಟ

ಮಾಡುವ ವಿಧಾನ:
ಒಂದು ದಪ್ಪ ತಳದ ಪಾತ್ರೆಗೆ 1.5 ಲೋಟ ನೀರು ಹಾಕಿ, ಅದಕ್ಕೆ 1 ಚಮಚ ಅಕ್ಕಿ ಹಿಟ್ಟು ಬೆರೆಸಿ ನೀರನ್ನು ಕುದಿಸಿ ಕೊಳ್ಳಿ. ಈ ಕುದಿಯುವ ನೀರಿಗೆ 1 ಲೋಟ ಅಕ್ಕಿ ಹಿಟ್ಟನ್ನು ಹಾಕಿ, ಕೈಯಾಡಿಸದೆ 10 ನಿಮಿಷ ಬೇಯಲು ಬಿಡಿ. ನಂತರ ಅಕ್ಕಿ ಹಿಟ್ಟನ್ನು ನೀರಿನಲ್ಲಿ ಕೆದುಕಿ ಮುದ್ದೆ ಮಾಡಿ. ಬಿಸಿ ಇದ್ದಾಗಲೇ ಅದನ್ನು ಚೆನ್ನಾಗಿ ನಾದಿ 2-3 ಉಂಡೆಗಳನ್ನು ಮಾಡಿಕೊಳ್ಳಿ.
ಮತ್ತೊಮ್ಮೆ ಒಂದು ಆಳವಾದ ಪಾತ್ರೆಗೆ ನೀರನ್ನು ಹಾಕಿ. ಇದಕ್ಕೆ ಮಾಡಿ ಇಟ್ಟಿರುವ ಉಂಡೆಗಳನ್ನು ಹಾಕಿ ಒಲೆಯ ಮೇಲೆ ಕುದಿಯಲು ಇಡಿ. ನೀರು ಕುದಿಯುತ್ತಿದ್ದಂತೆ ಉಂಡೆಗಳು ತೇಲುತ್ತವೆ. ಈ ಬಿಸಿಯಾದ ಉಂಡೆಗಳನ್ನು ಚಕ್ಕುಲಿ ಒರಳಲ್ಲಿ ಹಾಕಿ ಶಾವಿಗೆ ಒತ್ತಿರಿ. ಉಂಡೆಗಳನ್ನು ಆರಲು ಬಿಡದೆ, ಒಂದು ತಟ್ಟೆ ಅಥವಾ ಬಾಳೆ ಎಲೆಯ ಮೇಲೆ ಶಾವಿಗೆಯನ್ನು ಸುತ್ತುವಂತೆ ಒತ್ತಿ ಆರಲು ಬಿಡಿ.

ತಿನ್ನುವ ಬಗೆ:
ಸಿಹಿ ಶಾವಿಗೆ: ಗಸಗಸೆ ಪಾಯಸದ ಜೊತೆ ಸವಿಯಿರಿ.
ಖಾರ ಶಾವಿಗೆ: ಶಾವಿಗೆಗೆ ಸಾಸಿವೆ, ಕಡಲೆಬೇಳೆ, ಹಸಿಮೆಣಸಿನಕಾಯಿ ಮತ್ತು ನಿಂಬೆ ರಸದ ಒಗ್ಗರಣೆ ಕೂಡಿಸಿ 'ಶಾವಿಗೆ ಬಾತ್' ಮಾಡಬಹುದು.



**ಅಪರ್ಣ ಅನೂಪ್**
ನ್ಯೂ ಜೆರ್ಸಿ

# ಗಸಗಸೆ ಪಾಯಸ

ಬೇಕಾಗುವ ಸಾಮಗ್ರಿಗಳು :

ಗಸಗಸೆ: 4 ದೊಡ್ಡ ಚಮಚ
ಅಕ್ಕಿ: 1 ದೊಡ್ಡ ಚಮಚ
ಗೋಡಂಬಿ: 10 ಉಂಡೆ ಗೋಡಂಬಿಗಳು
ತಾಜಾ ತೆಂಗಿನ ತುರಿ: 1 ಕಪ್
ಬೆಲ್ಲ: 1 ರಿಂದ 1.5 ಕಪ್ (ನಿಮ್ಮ ಸಿಹಿಗೆ ತಕ್ಕಂತೆ)
ಏಲಕ್ಕಿ: 2
ಗೋಡಂಬಿ ಮತ್ತು ದ್ರಾಕ್ಷಿ (ಒಗ್ಗರಣೆಗೆ): ಸ್ವಲ್ಪ
ತುಪ್ಪ: 2 ಚಮಚ
ಹಾಲು: 1 ಕಪ್ (ಐಚ್ಛಿಕ)



ಚಿತ್ರ ಕೃಪೆ : ಅಂತರ್ಜಾಲ

ಮಾಡುವ ವಿಧಾನ:


ಮೊದಲು ಬಾಣಲೆಯಲ್ಲಿ ಗಸಗಸೆ ಮತ್ತು ಅಕ್ಕಿಯನ್ನು ಹಾಕಿ ಸಣ್ಣ ಉರಿಯಲ್ಲಿ ಹುರಿಯಿರಿ. ಗಸಗಸೆ ಚಟಪಟ ಎಂದು ಶಬ್ದ ಬರಲು ಪ್ರಾರಂಭಿಸಿದಾಗ ಒಲೆಯಿಂದ ಇಳಿಸಿ. (ಗಸಗಸೆ ಸೀದು ಹೋಗದಂತೆ ಜಾಗ್ರತೆ ವಹಿಸಿ). ಇವನ್ನು 10 ಉಂಡೆ ಗೋಡಂಬಿ ಜೊತೆ ಸ್ವಲ್ಪ ನೀರಿನಲ್ಲಿ 20 ನಿಮಿಷ ನೆನೆಸಿಡಿ. ನಂತರ ನೆನೆಸಿಟ್ಟಿರುವುದನ್ನು ತೆಂಗಿನ ತುರಿ ಮತ್ತು ಏಲಕ್ಕಿ ಸೇರಿಸಿ, ಸ್ವಲ್ಪ ನೀರು ಹಾಕಿ ನುಣ್ಣಗೆ ರುಬ್ಬಿಕೊಳ್ಳಿ.
ಒಂದು ದಪ್ಪ ತಳದ ಪಾತ್ರೆಗೆ ಬೆಲ್ಲ ಮತ್ತು ಸ್ವಲ್ಪ ನೀರು ಹಾಕಿ ಕರಗಿಸಿಕೊಳ್ಳಿ. ಈ ಬೆಲ್ಲದ ನೀರಿಗೆ ರುಬ್ಬಿದ ಮಿಶ್ರಣವನ್ನು ಸೇರಿಸಿ. ಅವಶ್ಯಕತೆ ಇದ್ದರೆ ಸ್ವಲ್ಪ ನೀರು ಹಾಕಿ ಹದ
ಮಾಡಿಕೊಳ್ಳಿ. ಸಣ್ಣ ಉರಿಯಲ್ಲಿ 10-12 ನಿಮಿಷಗಳ ಕಾಲ ಚೆನ್ನಾಗಿ ಕುದಿಸಿ. ಗಸಗಸೆಯ ಹಸಿ ವಾಸನೆ ಹೋಗಿ ಪಾಯಸ ಸ್ವಲ್ಪ ಗಟ್ಟಿಯಾಗಬೇಕು. ಇದಕ್ಕೆ ತುಪ್ಪದಲ್ಲಿ ಮಾಡಿದ ಗೋಡಂಬಿ ಹಾಗು ದ್ರಾಕ್ಷಿ ಒಗ್ಗರಣೆಯನ್ನು ಹಾಕಿ, ಕೊನೆಯಲ್ಲಿ ಬಿಸಿ ಮಾಡಿದ ಹಾಲನ್ನು ಸೇರಿಸಿ.
ಈ ಪಾಯಸದ ಜೊತೆ ಒತ್ತು ಶಾವಿಗೆಯ ರುಚಿ ಬೊಂಬಾಟ್!!!


# ಚಿಣ್ಣರ ಲೋಕ






**ತನ್ವಿ ಶರತ್**
9 ವರ್ಷ






**ನವಿಷ್ಕಾ ಮಂಜುನಾಥ್**
12 ವರ್ಷ





ವಿದುಲಾ ಕೊಪೆ



ನ್ಯೂಜರ್ಸಿ

ನಮ್ಮ ನಾಡಿದು ನಮ್ಮದು
ನಮ್ಮೆ ನ್ಯೂಜರ್ಸಿ ನಾಡಿದು

ನಾನು ಬೆಳೆದ ಊರಿದು
ಗಾರ್ಡನ್ ಸ್ಟೇಟ್ ಅಂತೆ ಹೆಸರಿದು
ತೋಟಗಳೆ ಬಿಡಿದು
ನಮ್ಮ ನಾಡಿದು ನಮ್ಮದು
ನಮ್ಮೆ ನ್ಯೂಜರ್ಸಿ ನಾಡಿದು

ಕಾಮನ್ ಬ್ಲೂ ಬೈಲೆಟ್ ಈ ನಾಡಿನ ಪುಷ್ಪ
ಈಸ್ಟರ್ನ್ ಗೋಲ್ಡ್ ಫಿಂಚ್ ನಾಡಿನ ಹಕ್ಕಿ
ಬೋರ್ಡ್ ವಾಕ್ ನಲ್ಲಿ ನಡೆಯಬಹುದು
ಅಟ್ಲಾಂಟಿಕ್ ಸಾಗರ ನೋಡ ಬಹುದು
ನಮ್ಮ ನ್ಯೂಜರ್ಸಿ ನಾಡಿದು
ನಮ್ಮೆ ನಾಡಿದು ನಮದು

ನಮ್ಮ ರಾಜ್ಯ ಸೆಣ್ಣಿದಾದರೂ,
ನಮ್ಮೆ ನ್ಯೂಜರ್ಸಿ ನಮಗೆ ಇಷ್ಟವಾದದ್ದು

ನಮ್ಮ ನಾಡಿದು ನಮ್ಮದು
ನಮ್ಮೆ ನ್ಯೂಜರ್ಸಿ ನಾಡಿದು

- ವಿದುಲಾ ಕೋಪೆ, ಈಸ್ಟ್ ಲಿಂಡರ್ ಕನ್ನಡ ಶಾಲೆ

-Inspired by the poem "Namma Karnataka Naadu" written by: ಲಿ. ಸು.ರಾ ಎಸ್

# ಕ್ಯಾಮರಾ ಕಣ್ಣಲ್ಲಿ





**ಮಂಗಳ ಸುಬ್ಬು**
ನ್ಯೂ ಜೆರ್ಸಿ

# ಬ್ಯಾನ್ಫ್ ಮತ್ತು ಜ್ಯಾಸ್ಪರ್























**ಮಂಜುನಾಥ್ ಶಂಕರ್**
ಬೆಂಗಳೂರು












**ಬೃಂದಾವನ ವಾಣಿ ಹಿಂದಿನ ಸಂಚಿಕೆಗಳನ್ನು ಇಲ್ಲಿ ಓದಬಹುದು :**
**https://brindavana.org/brindavanavani/**














**ನಿಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ನಮಗೆ ಇಲ್ಲಿ ತಿಳಿಸಿ :**

**brindavanavani@gmail.com**

**ಮುಂದಿನ ಸಂಚಿಕೆಯಲ್ಲಿ ಸಿಗೋಣ...**